ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪತ್ರಿಕೆ

ಸಂಪುಟ 10 ಸಂಚಿಕೆ 15-16 ಏಪ್ರಿಲ್ 17, 1988 ಬೆಲೆ: 60 ಪೈಸೆ

ತ್ರಿಪುರ ಸೌಹಾರ್ದ ನಿಧಿ

ಶಂಕರನಾರಾಯಣ, ಪಾವಗಡ	ರೂ. 1000

ಐಕ್ಯರಂಗಕ್ಕೆ ಸಹಾಯ

ಎಂ. ವಿ. ಶ್ರೀರಾಮಗುಪ್ತ, ಪಾವಗಡ	ರೂ. 500
ಎನ್. ಕೆ. ಉಪಾಧ್ಯಾಯ ([illegible])	ರೂ. 500
ಅಅವಿೂನಾಬಿ	ರೂ. 10

ಎನ್. ಎಲ್. ಅವರಿಗೆ ಸಹಾಯ ಧನ

ಕೆ. ಲಕ್ಷ್ಮೀನಾರಾಯಣರಾವ್ ತೀರ್ಥಹಳ್ಳಿ	ರೂ. 100
ಎ. ಮಾಧ್ವರಾಜಬಲ್ಲಾಳ ತೀರ್ಥಹಳ್ಳಿ	ರೂ. 50
ರಾಮಯ್ಯರೆಡ್ಡಿ ಮಾಲೂರು	ರೂ. 50
ಇಂಡಿಯನ್ ಪ್ಲೇವುಡ್ ಕಂಪನಿ ಕಾರ್ಮಿಕರ ಸಂಘ ಧಾರವಾಡ	ರೂ. 500

ಎ. ಐ. ಕೆ. ಸಿ. ಸಭೆಯ ಕಾರ್ಯಕಲಾಪಗಳು ಮತ್ತು ತೀರ್ಮಾನಗಳು

ಪಿ. ರಾಮಚಂದ್ರರಾವ್

ಎಐಕೆಸಿ ಸಭೆಯು ಏಪ್ರಿಲ್ 4 ರಂದು ಬೆಳಿಗ್ಗೆ 9-45ಕ್ಕೆ ಎಐಕೆಎಸ್ ಅಧ್ಯಕ್ಷರಾದ ಕಾ॥ ಗೋದಾವರಿ ಪರುಳೇಕರರವರು ಧ್ವಜಾರೋಹಣ ಮಾಡುವುದರೊಂದಿಗೆ ಆರಂಭವಾಯಿತು.

ಎಲ್ಲಾ ಎಐಕೆಸಿ ಸದಸ್ಯರು ಅನಂತರ ಹುತಾತ್ಮರ ಸ್ಮಾರಕಕ್ಕೆ ಪುಷ್ಪ ಅರ್ಪಿಸಿದರು.

ಸಭೆಯ ಕಾರ್ಯಕಲಾಪಗಳು "ಶ್ರದ್ಧಾಂಜಲಿ" ಠರಾವು ಅಂಗೀಕಾರ ಮಾಡುವುದರ ಮೂಲಕ ಶುರುವಾಯಿತು. ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಕಾಂ॥ ಎನ್. ಶಂಕರಯ್ಯನವರು ಪದಾಧಿಕಾರಿಗಳ ಪರವಾಗಿ ತಮ್ಮ ವರದಿಯನ್ನು ಸಮರ್ಪಿಸುತ್ತಾ "ಕಟಕ್‌ದಲ್ಲಿ ಸುಮಾರು 1ವರ್ಷದ ಹಿಂದೆನಾವು ಸೇರಿ ಮಾಡಿದ ಮುಖ್ಯ ತೀರ್ಮಾನಗಳು:-ಬರಗಾಲ, ನೆರೆಪರಿಹಾರ ಚಳುವಳಿ, ಸೆಪ್ಟೆಂಬರ್ 7-13ರ ದೇಶದಾದ್ಯಂತ ರೈತರ 13 ಬೇಡಿಕೆಗಳಿಗಾಗಿ ನಡೆದ ಪಿಕೆಟಿಂಗ್ ಚಳುವಳಿ ಹೇಗೆ ಯಶಸ್ವಿಯಾಗಿ ನಡೆದವು ಎಂಬುದರ ಕುರಿತು. ವಿವರಗಳನ್ನು ಕೊಟ್ಟರು." ಅಲ್ಲದೆ, ದೇಶದ ಎಲ್ಲಾ ಸಾಮೂಹಿಕ ಸಂಘಟನೆಗಳ ಜತೆಗೂಡಿ ನಡೆಸಿದ ಅಖಿಲ ಭಾರತ ಕಿಸಾನ್-ಮಜದೂರ್ ಜಾತಾಗಳಲ್ಲೂ, ದಿಲ್ಲಿಯಲ್ಲಿ ಡಿಸೆಂಬರ್ 9 ರಂದು ನಡೆದ ಬೃಹತ್ ಸಭೆಯಲ್ಲೂ ಅಖಿಲ ಭಾರತ ಕಿಸಾನ್ ಸಭಾ ಅತ್ಯಂತ ಅಧಿಕ ಉತ್ಸಾಹದಿಂದ ಭಾಗವಹಿಸಿದುದರ ಕುರಿತು ವಿವರಿಸಿದರು.

ತ್ರಿವೇಂಡ್ರಮ್‌ನಲ್ಲಿ ನಡೆದ ಸಿಕೆಸಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಪುನರುಚ್ಚರಿಸಿ ಅವುಗಳ ಕುರಿತು ಈ ಸಭೆಯಲ್ಲಿ ಅಂತಿಮ ತೀರ್ಮಾನ-ವಿವಿಧ ಬೆಳೆಗಳ ವಿಷಯದಲ್ಲಿ ಸಮಾವೇಶಗಳನ್ನೂ ನಡೆಸುವ ಕುರಿತು—ಕೈಗೊಳ್ಳಬೇಕೆಂದು ಸಭೆಗೆ ತಿಳಿಸಿದರು.

ಆ ನಂತರ ಈ ವರದಿಯ ಕುರಿತು ಪ್ರತಿಯೊಂದು ರಾಜ್ಯದಿಂದ ಒಬ್ಬರು ಅಥವಾ ಇಬ್ಬರು ಮಾತನಾಡಿ ವರದಿಯಲ್ಲಿ ಎತ್ತಿದ ಸಮಸ್ಯೆಗಳ ಮತ್ತು ವಿಷಯಗಳ ಕುರಿತು ತಮ್ಮ ರಾಜ್ಯದಲ್ಲಿ ಚಳವಳಿಯ ಅನುಭವವನ್ನು ಹೇಳಿದರು.

ಸಾಮಾನ್ಯವಾಗಿ ಇಂತಹ ಸಭೆಗಳಲ್ಲಿ ಸದಸ್ಯರು ತಮ್ಮ ತಮ್ಮ ರಾಜ್ಯದ ಎಲ್ಲಾ ಚಟುವಟಿಕೆಗಳ ಕುರಿತು ವರದಿ ಕೊಡುವುದು ರೂಢಿ. ಆದರೆ, ಈ ಸಭೆಯಲ್ಲಿ, ಎಲ್ಲರೂ ಅಖಿಲ ಭಾರತ ಕಿಸಾನ್ ಚಳವಳಿಯನ್ನು ಬೆಳೆಸುವ ದೃಷ್ಟಿಯಿಂದ ತಮ್ಮ ಅನುಭವನ್ನು ಉದಾಹರಿಸಿ ಮಾತಾಡಿದುದು ವಿಶೇಷವೂ ಸೂಕ್ತವೂ ಆಗಿತ್ತು.

ಬಿಹಾರದಲ್ಲಿ ಅಕ್ಟೋಬರ್ ತಿಂಗಳಲ್ಲಿ ಕೃಷಿ ಕೂಲಿಕಾರರ ಮೇಲೆ ನಡೆದ ದೌರ್ಜನ್ಯದ ಕುರಿತು ಸಮಾವೇಶ ನಡೆಸುವುದೆಂದೂ, ಕೇರಳದಲ್ಲಿ ಅಡಿಕೆ ಮತ್ತು ತೆಂಗು ವ್ಯವಸಾಯದಲ್ಲುಂಟಾದ ಕುಸಿತದ ಕುರಿತು ಸಮಾವೇಶ ನಡೆಸುವುದೆಂದೂ ತೀರ್ಮಾನಿಸಲಾಯಿತು.

ಚರ್ಚೆಯಲ್ಲಿ ಮಧ್ಯೆ ಪ್ರವೇಶಿಸಿ ಕಾ॥ ಹರಿಕಿಶನ್ ಸಿಂಗ್ ಸುರಜೀತ್ ಇವರು "ಇತ್ತೀಚೆಗೆ ದೇಶದಾದ್ಯಂತವಾಗಿ ನಡೆದ ಯಶಸ್ವಿ ಭಾರತ ಬಂದ್‌ನ ಕುರಿತು ವಿವರಣೆ ಇತ್ತು, ಈ ಭಾರತ ಬಂದ್‌ನ ಯಶಸ್ಸು ದೇಶದಲ್ಲಿ ಜನತೆ ರಾಜೀವಗಾಂಧಿ ರಾಜ್ಯಭಾರದ ವಿರುದ್ಧ ಎಷ್ಟು ಅತೃಪ್ತಿಗೊಂಡಿದ್ದಾರೆ ಎಂಬುದನ್ನು ದೃಢಪಡಿಸುತ್ತದೆ" ಎಂದು ಸಾರಿದರು.

ಅವರು ಮುಂದುವರಿಸುತ್ತಾ ಸಂವಿಧಾನಕ್ಕೆ 59ನೇ ತಿದ್ದುಪಡಿಯನ್ನು ಅವಸರವಸರವಾಗಿ ತಂದು ದೇಶದಲ್ಲಿ ಪುನಃ ಎಲ್ಲಿ ಬೇಕಾದರಲ್ಲಿ ತುರ್ತು ಪರಿಸ್ಥಿತಿಯನ್ನು ಸಾರಿ ಪ್ರಜಾಪ್ರಭುತ್ವವನ್ನೇ ಕೊಲ್ಲುವ ಸನ್ನಾಹ ಮಾಡುತ್ತಿರುವುದನ್ನು ವಿವರಿಸಿ, ಈ ವಿಷಯದಲ್ಲಿ ರೈತರು, ಕಾರ್ಮಿಕರು ದೇಶದ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳ ಜತೆ ಸೇರಿ ಕೂಡಲೇ ಗಂಭೀರ ಪ್ರತಿಭಟನೆಯ ಕಪ್ಪು ದಿನಾಚರಣೆ ಮಾಡುವ-ಕಾರ್ಯಕ್ರಮ ಹಾಕಲು ಮುಂದಾಗಬೇಕು" ಎಂದು ಕರೆ ಕೊಟ್ಟರು.

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ "ಬ್ರಿಟಿಶರನ್ನು ದೇಶದಿಂದ ಹೊರಹಾಕುವ ಸ್ವಾತಂತ್ರ್ಯ ಚಳುವಳಿಯನ್ನು ಮಾಡುತ್ತಿರುವಾಗಲೇ, ತಮ್ಮ ತ್ವರಿತ ಬೇಡಿಕೆಗಳಿಗಾಗಿ ಧೀರ ಹೋರಾಟಗಳನ್ನು ಮಾಡುತ್ತಾ ಬಂದ ಅಖಿಲ ಭಾರತ ಕಿಸಾನ್ ಸಭಾ, ಇದೀಗ 40 ವರ್ಷಗಳ ನಂತರ ಪುನಃ ತಮ್ಮ ಬೇಡಿಕೆಗಳಿಗಾಗಿ ಧೀರ ಹೋರಾಟಗಳನ್ನು ಅಖಿಲ ಭಾರತ ಮಟ್ಟದಲ್ಲಿ ನಡೆಸುತ್ತಿರುವಾಗಲೇ, ಈ ಎಲ್ಲಾ ಸಮಸ್ಯೆಗಳು ಬೃಹದಾಕಾರವಾಗಿ ಬೆಳೆದು ರೈತರ ಹಾಗೂ ದೇಶದ ತೀವ್ರ ಬಿಕ್ಕಟ್ಟಿಗೆ ಕಾರಣವಾದ ರಾಜೀವಗಾಂಧಿ ಕಾಂಗ್ರೆಸ್ಸಿನ ಧೋರಣೆಗಳಾಗಿರುವುದರಿಂದ ರಾಜೀವಗಾಂಧಿ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸುವ ಹೋರಾಟದಲ್ಲಿ ಸಕ್ರಿಯ ಪಾತ್ರ ವಹಿಸಬೇಕೆಂದು ಕರೆಕೊಟ್ಟರು.

ಕೊನೆಯದಾಗಿ, ಎಐಕೆಸಿ ಸಭೆಯಲ್ಲಿ ಸಂಘಟನೆ"ಯ ಕುರಿತು ಅನುಭವ "ವಿನಿಮಯ ಮಾಡಿ "ಈ ಕುರಿತು ನಿರ್ದಿಷ್ಟವಾದ ಸಂಘಟನಾ ಸೂತ್ರಗಳನ್ನು ರೂಪಿಸಿ ದೇಶದಲ್ಲಿ ಅತ್ಯಂತ ದೊಡ್ಡ ಸಮರಧೀರ ವರ್ಗ ಸಂಘಟನೆಯಾಗಿ ಬೆಳೆದು ಬರುವಂತೆ ಕ್ರಮ ವಹಿಸುವಂತಾಗಬೇಕು" ಎಂಬ ಅಭಿಪ್ರಾಯಕ್ಕೆ ಬಂತು.

ಹೀಗೆ ಕರ್ನಾಟಕದಲ್ಲಿ ನಡೆದ ಎಐಕೆಸಿ ಸಭೆಯು ಅತ್ಯಂತ ಮಹತ್ವದ ಸಭೆಯಾಗಿ ಪರಿಣಮಿಸಿತು ಎಂದು ಹೇಳಲು ನಮಗೆ ಬಹಳ ಸಂತೋಷವಾಗುತ್ತದೆ.

1ಕೋಟಿಗಿಂತಲೂ ಅಧಿಕ ಸಂಖ್ಯೆಯ ಸದಸ್ಯರುಗಳ ಅಖಿಲ ಭಾರತ ಕಿಸಾನ್ ಸಭೆಯು ತನ್ನ ಐವತ್ತೆರಡು ವರ್ಷಗಳ ಅನುಭವದ ಆಧಾರದಲ್ಲಿ ದೇಶದ ಇಂದಿನ ಪರಿಸ್ಥಿತಿಯಲ್ಲಿ ರೈತರನ್ನು ಅಣಿನೆರೆಸುವ ಹೋರಾಟಕ್ಕೆ ಇಳಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಲಿ ಎಂದು ಹಾರೈಸೋಣ.

ರೈತರ ವರ್ಣಮಯ ಮೆರವಣಿಗೆ

ಅಂದು ಬೆಂಗಳೂರಿಗೆ ದೇಶದ ಎಲ್ಲಾ ಪ್ರಸಿದ್ಧ ರೈತ ಹೋರಾಟಗಳ ಸಮರ ಧೀರರ ಆಗಮನ. ತೆಲಂಗಾಣದ, ಬಂಗಾಲದ, ಕೇರಳದ ಕಯ್ಯೂರು, ಪುನ್ನಪ್ರವಯಲಾರ್ ಹೋರಾಟಗಳ ಮಹಾರಾಷ್ಟ್ರದ ವಾರಲೀ,ಪಂಜಾಬಿನ ಬೆಟರ್‌ಮೆಂಟ್ ಲೇವಿ ಹೋರಾಟಗಳ ವೀರರು ಮಾತ್ರವೇ ಅಲ್ಲ ಇಂದು ಪಂಜಾಬಿನ ಖಲಿಸ್ತಾನೀ ಉಗ್ರಗಾಮಿಗಳನ್ನು, ಅಸ್ಸಾಮಿನ ವಿಚ್ಛಿದ್ರಕಾರಿಗಳನ್ನು ಧೈರ್ಯದಿಂದ ಎದುರಿಸುತ್ತಿರುವ ರೈತ ನಾಯಕರನ್ನು ಭೇಟಿ ಮಾಡಲು, ಅವರ ವೀರ ವಾಣಿಯನ್ನಾಲಿಸಲು ಕರ್ನಾಟಕದ ಎಲ್ಲಾ ಭಾಗಗಳಿಂದ ರೈತರ ಆಗಮನ, ಕೇಂದ್ರ ಸರ್ಕಾರದ ರೈತ ವಿರೋಧಿ ಧೋರಣೆಯನ್ನು ಪ್ರತಿಭಟಿಸಲು, ರಾಜ್ಯ ಸರ್ಕಾರ ರೈತಪರ, ದುಡಿಯುವ ಜನರ ಪರವಾದ ಧೋರಣೆಯನ್ನು ತಳೆಯಲು ಒತ್ತಡ ಹೇರಲು "ವಿಧಾನ ಸೌಧ ಚಲೋ" ಎಂಬ ಘೋಷಣೆಯೊಡನೆ ಬಿಜಾಪುರ, ಕೋಲಾರಗಳಿಂದ, ದ.ಕ. ಜಿಲ್ಲೆ, ಗುಲ್ಬರ್ಗ ರಾಯಚೂರು ಬಳ್ಳಾರಿಗಳಿಂದ ರೈತರು, ಕೃಷಿಕಾರ್ಮಿಕರು, ಮಹಿಳೆಯರು ಮಕ್ಕಳು ಕೂಡ ಬಂದಿದ್ದ ರೈತರು ಅಖಿಲ ಭಾರತ ರೈತ ನಾಯಕರ ಮಾತುಗಳನ್ನು ಮನಸ್ಸಿಕೊಟ್ಟು ಆಲಿಸಿದರು.

ಮಧ್ಯಾಹ್ನ 2.00ಗಂಟೆಗೆ ಸಿಲ್ವರ್ ಜ್ಯೂಬಿಲಿ ಪಾರ್ಕಿನಿಂದ ಹೊರಟ ವರ್ಣ ರಂಜಿತ ಮೆರವಣಿಗೆ ನೋಡುವವರ ಕಣ್ಮನಗಳನ್ನು ಸೆಳೆಯುತ್ತಿತ್ತು. ಬಿಜಾಪುರದ ಪ್ರಸಿದ್ಧ ಡೊಳ್ಳುವಾದನ, ಕಹಳೆ, ಕಂಸಾಳೆಗಳು ರಣ ವಾದ್ಯಗಳು ರೈತರ ಹೋರಾಟಕ್ಕೆ ಮುನ್ನುಡಿಯಾದಿ ಮುಂದೆ ಬಂದವು. ದೇವಾಲಯದ ಗರುಡ ಗಂಬಗಳನ್ನು ಎತ್ತಿ ಕುಣಿಯುವ ಜನ ಕೆಂಬಾವುಟವನ್ನೇರಿಸಿದ್ದ ಕಂಬಗಳನ್ನೆತ್ತಿ ಕುಣಿಯುತ್ತಾ ಸಾಗಿದರು, ಡಿ. ವೈ ಎಫ್. ಐ, ಮಹಿಳಾ ಸಂಘಟನೆಯವರಿಂದ ಮೆರವಣಿಗೆಯ ಉದ್ದಕ್ಕೂ ಸಾಂಸ್ಕೃತಿಕ ಕಾರ್ಯಕ್ರಮಗಳು–ಈ ದೇಶವನ್ನು ಕಟ್ಟಿದ ಕೈಗಳು ಯಾರು? ಎಂದು ಕೇಳಿದ "ಒಂದು ಪ್ರಶ್ನೆ, "ಕ್ರಾಂತಿ ಗಾನಗಳು, "ಕಲಿಯಣ್ಣ ಕಲಿಯೋ" ಎಂದು ರೈತರಿಗೆ ಪ್ರಚೋದನೆ ನೀಡಿದ ಕಿರುನಾಟಕ, ಇವು ಜನರನ್ನು ಮೆಚ್ಚಿಸಿದವು. ಇವೆಲ್ಲಕ್ಕೂ ಮುಂದೆ ಬೃಹದಾಕಾರದ ಕುಡುಗೋಲು–ಸುತ್ತಿಗೆಯ ಚಿತ್ರ ರೈತ-ಕಾರ್ಮಿಕರ ಸಖ್ಯತೆಯ

(4ನೇ ಪುಟ ನೋಡಿ)

ಕೇಂದ್ರ ಸರ್ಕಾರ ದೇಶವನ್ನು ಹಾಳುಗೆಡುವುತ್ತಿದೆ —ಕಾಂ. ಸುರಜೀತ್

ದೇಶದ ಆರ್ಥಿಕ ಬಿಕ್ಕಟ್ಟಿನ ಭಾರವನ್ನೂ ದೇಶದ ರೈತರ ಮೇಲೆ, ದುಡಿಯುವ ಜನರ ಮೇಲೆ ಹೇರಿ ಗುತ್ತೇದಾರಿಗಳಿಗೆ ಎಲ್ಲಾ ಅನುಕೂಲವನ್ನು ಕಲ್ಪಿಸಲು ರಾಜೀವ್‌ಗಾಂಧಿಯವರ ಕೇಂದ್ರ ಸರ್ಕಾರ ಯತ್ನಿಸುತ್ತಿದೆ. ಇದು ಬಹುರಾಷ್ಟ್ರೀಯ ಕಂಪನಿಗಳ ದೋಚುವಿಕೆಗೆ ದೇಶವನ್ನು ತೆರೆದಿಟ್ಟು ದೇಶವನ್ನು ವಿನಾಶದಂಚಿಗೆ ದೂಡುತ್ತಿದೆ ಎಂದು ಕಾ॥ ಹರ್‌ಕಿಷನ್‌ಸಿಂಗ್ ಸುರ್ಜೀತ್ ಆಪಾದಿಸಿದರು. ಅವರು ಮಾರ್ಚ್ ಮೂರರಂದು ಬೆಂಗಳೂರಿನಲ್ಲಿ ನೆರೆದಿದ್ದ ರೈತರ ಬೃಹತ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ದೇಶದ ಐಕ್ಯತೆಯನ್ನು ಸಮಗ್ರತೆಯನ್ನು ರಕ್ಷಿಸುತ್ತೇ[illegible] ಎಂದು ಕೂಗುತ್ತಾ, ಅಧಿಕಾ[illegible]ಂದ ಈ ಸರಕಾರ ದೇಶವನ್ನು [illegible] ಸರ್ಕಾರವಾಗಿದೆ. ಐದು ಜನ ಸಿಕ್ ಮತೀಯ ನಾಯಕರನ್ನು ಬಿಡುಗಡೆ ಮಾಡಿದ ಕೇಂದ್ರ ಸರ್ಕಾರದ ಕ್ರಮ ಭಯೋತ್ಪಾದಕರಿಗೆ ಉತ್ತೇಜನ ನೀಡಿದಂತಾಗಿದೆ. ಅಂದಿನಿಂದ ಪಂಜಾಬಿನ ಅಲ್ಪಸಂಖ್ಯಾತರು ಮಾತ್ರವಲ್ಲ, ಸಿಖ್ ಜನರು ವಲಸೆ ಹೋಗಲಾರಂಭಿಸಿದ್ದಾರೆ ಎಂದು ಹೇಳಿದರು.

ಈ ಗಂಡಾಂತರಕಾರಿ ಸರ್ಕಾರವನ್ನು ಎದುರಿಸಬೇಕಾದರೆ ಎಲ್ಲಾ ಜಾತ್ಯಾತೀತ ಹಾಗೂ ಎಡ ಶಕ್ತಿಗಳ

(4ನೇ ಪುಟ ನೋಡಿ)

ಅರಸು ಎಡರಂಗಕ್ಕಿಂತ ಪ್ರಗತಿಪರರೇ?

—ಕಾಂ. ಇ.ಎಂ.ಎಸ್.

ಪ್ರಶ್ನೆ :

ಕರ್ನಾಟಕದಲ್ಲಿ ದೇವರಾಜ್ ಅರಸು ಮುಖ್ಯಮಂತ್ರಿಯಾಗಿದ್ದಾಗ, ಜಮೀನನ್ನು ಗೇಣಿಗೆ ಬಿಡುವುದನ್ನು ಕಾನೂನಿನ ಪ್ರಕಾರ ನಿರ್ಬಂಧಿಸಲಾಯಿತು. ಈಗ ಗೇಣಿ ಪದ್ಧತಿ ಕಾನೂನು ಬಾಹಿರವಾಗಿದೆ. ಆದರೆ ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರ್ಕಾರ ಇದ್ದಾಗ್ಯೂ, ಗೇಣಿ ಪದ್ಧತಿ ಮುಂದುವರೆದಿದೆ. ಗೇಣಿದಾರಭೂಮಾಲಿಕನಿಗೆ ಗೇಣಿ ಕೊಡಬೇಕಾಗಿದೆ. ಕೆಲವರು ಎಡರಂಗ ಟೀಕಿಸುವುದಕ್ಕೆ ಈ ವಾದವನ್ನು ಮುಂದೊಡ್ಡುತ್ತಾರೆ. ಈ ವಿಷಯದಲ್ಲಿ "ಪಶ್ಚಿಮ ಬಂಗಾಳದ ಎಡರಂಗ ಸರ್ಕಾರಕ್ಕಿಂತ ಕರ್ನಾಟಕದ ಕಾಂಗ್ರೆಸ್ ಸರಕಾರವೇ ಹೆಚ್ಚು ಪ್ರಗತಿಪರ" ಎಂಬುದು ಅವರ ಅಂಬೋಣ. ಇದರ ಬಗ್ಗೆ ದಯವಿಟ್ಟು ಸ್ಪಷ್ಟೀಕರಿಸಿ.

–ಕೊಡಗಿನ ಒಬ್ಬ ಸಂಗಾತಿ

ಈ ಪ್ರಶ್ನೆಯಲ್ಲಿ ಭೂಸಂಬಂಧಗಳು ಬರಿಯ ಕಾನೂನಿಗೆ ಸಂಬಂಧ ಪಟ್ಟವೇನೋ ಎಂಬಂತೆ, ಇಡೀ ಸಮಸ್ಯೆಯನ್ನು ಕಾನೂನಿನ ಚೌಕಟ್ಟಿನಿಂದ ಮಾತ್ರ ನೋಡಲಾಗಿದೆ. ಆದರೆ ವಾಸ್ತವವಾಗಿ ಭೂಸಂಬಂಧಗಳು ಮಾತ್ರವಲ್ಲ, ಎಲ್ಲಾ ರೀತಿಯ ಸಾಮಾಜಿಕ ಸಂಬಂಧಗಳಿಗೆ ಸಂಬಂಧಪಟ್ಟ ಕಾನೂನುಗಳೂ ವಿವಿಧ ವರ್ಗಗಳ ನಡುವೆ ಇರುವ ಪ್ರಸಕ್ತ ಸಂಬಂಧಗಳನ್ನು ಮಾತ್ರ ಸಂಕೇತಿಸುತ್ತವೆ. ಭೂಸುಧಾರಣಾ ಕಾನೂನು ಮತ್ತು ಇತರ ಸಾಮಾಜಿಕ ಕಾನೂನುಗಳು ಸಾಮಾಜಿಕ ಬದಲಾವಣೆ ತರಲು ಪ್ರಮುಖ ಸಾಧನಗಳು ಎಂಬುದು ನಿಜ. ಆದರೆ ಈ ಕಾನೂನುಗಳನ್ನು ಜಾರಿಗೊಳಿಸ ಬೇಕಾದರೆ ಸಾಮಾಜಿಕ ಕಾರ್ಯಾಚರಣೆ ಅಗತ್ಯ ಎಂಬುದು ಅಷ್ಟೇ ನಿಜ.

ಗೇಣಿ ಪದ್ಧತಿಯನ್ನು ಕಾನೂನಿನಿಂದ "ರದ್ದು" ಮಾಡಿದರೂ, ಮಾಜಿ ಗೇಣಿದಾರರು (ಈಗ ಕಾನೂನು ಬದ್ಧವಾಗಿ ಭೂಮಿಯ ಒಡೆತನ ಪಡೆದರೂ) ಆ ಭೂಮಿಯನ್ನು ಲಾಭದಾಯಕವಾಗಿ ಕೃಷಿ ಮಾಡುವ ಪರಿಸ್ಥಿತಿಯಲ್ಲಿಲ್ಲದಿದ್ದರೆ ಭೂಮಿಯನ್ನು ಒತ್ತೆ ಇಡಬೇಕಾಗಿ ಬರಬಹುದು. ಕೊನೆಗೆ ಅದೇ ಭೂಮಿಯನ್ನು ಮಾರಬೇಕಾದ ಪರಿಸ್ಥಿತಿಯೂ ಬರಬಹುದು, ಅದಕ್ಕಾಗಿಯೇ ಸಮಾಜ ಸುಧಾರಕರು, ಭೂಸುಧಾರಣಾ ಕಾನೂನುಗಳ ಜತೆ ಸುಲಭ ಸಾಲವನ್ನು ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆಗಳನ್ನು ಕೃಷಿ ಉತ್ಪಾದನೆಗೆ ಬೇಕಾದ ಸಾಮಗ್ರಿಗಳನ್ನು ಸುಲಭ ಬೆಲೆಗಳಲ್ಲಿ ಒದಗಿಸುವುದು ಇತ್ಯಾದಿ ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯಗತ್ಯವೆನ್ನುತ್ತಾರೆ.

ಭೂಮಾಲಕ-ಗೇಣಿದಾರ ಸಂಬಂಧಗಳು, ರೈತರಿಗೆ ಮತ್ತಿತರ ಬಡವರಿಗೆ ಸುಲಭ ಸಾಲ, ಕೃಷಿ ಅಗತ್ಯ ಸಾಮಗ್ರಿಗಳಿಗೆ ಸುಲಭ ಬೆಲೆ, ಉತ್ಪನ್ನಗಳಿಗೆ ಲಾಭದಾಯಕ ಬೆಲೆಗಳು, ಸಾಲದಿಂದ ವಿಮುಕ್ತಿ—ಮುಂತಾದ ಸಮಸ್ಯೆಗಳಲ್ಲಿ ಕಾಂಗ್ರೆಸ್ ಸರ್ಕಾರಗಳ ವರ್ಗ ನೀತಿಗಳು. ಗೇಣಿದಾರರನ್ನು ಭೂಮಾಲಿಕನ ನೇರ ಶೋಷಣೆಯಿಂದ ವಿಮುಕ್ತಿಗೊಳಿಸಿದರೂ, ಅವರು ತಮ್ಮ ಕಸುಬು ಮುಂದುವರಿಸಲು ಅನುಕೂಲಕರವಾಗಿಲ್ಲ. ಇದು ಕಾಂಗ್ರೆಸ್‌ನ ವರ್ಗನೀತಿಗಳ ಬಗ್ಗೆ ನಮ್ಮ ಪ್ರಮುಖ ಟೀಕೆ. ರೈತರು ಮತ್ತು ಕೃಷಿಕೂಲಿಕಾರರನ್ನು ವರ್ಗದ ಆಧಾರದ ಮೇಲೆ ಭೂಮಾಲೀಕನ ಮತ್ತು ಇತರ ರೂಪದ ಶೋಷಣೆಯ ವಿರುದ್ಧ ಹೋರಾಟ ಮಾಡುವ ಶಕ್ತಿಯಿರುವಂತೆ ಸಂಘಟಿಸಿದರೆ ಮಾತ್ರ ಆಳುವ ಪಕ್ಷದ ವರ್ಗ ನೀತಿಗಳನ್ನು ಎದುರಿಸಲು ಸಾಧ್ಯ.

ಹಳ್ಳಿಯ ಬಡವರನ್ನು ಸಂಘಟಿಸುವಲ್ಲಿ, ಭೂಮಾಲಿಕರ ಶೋಷಣೆಯನ್ನು ಕೊನೆಗಾಣಿಸುವುದು ಪ್ರಪ್ರಥಮ ಕೆಲಸವೆಂಬುದೇನೋ ನಿಜ. ಆದ್ದರಿಂದಲೇ 50 ವರ್ಷದ ಹಿಂದೆ ಅಖಿಲ ಭಾರತ ಕಿಸಾನ್ ಸಭಾ ರಚನೆಯಾದಾಗ, ಪಾಳೆಯಗಾರಿ ಜಮೀನುದಾರಿ ಪದ್ಧತಿಯನ್ನು ರದ್ದುಗೊಳಿಸುವುದು ಅದರ ಮುಖ್ಯ ಕಾರ್ಯಕ್ರಮವಾಗಿತ್ತು. ಈ ಮುಖ್ಯ ಕಾರ್ಯಕ್ರಮದ ಜತೆಗೆ ಹಳ್ಳಿಯ ಸಾಲ, ಬೆಲೆಗಳು, ಕೃಷಿ ಸಾಮಗ್ರಿಗಳ ಬೆಲೆಗಳು ಇತ್ಯಾದಿಗಳ ಬಗೆಗೂ ಪೂರಕ ಬೇಡಿಕೆಗಳನ್ನಿಟ್ಟಿತ್ತು.

ಕಿಸಾನಸಭಾಕ್ಕೆ ಪಾಳೆಗಾರಿ ಜಮೀನುದಾರಿ ಪದ್ಧತಿಯ ವಿರುದ್ಧ ಹೋರಾಟದಲ್ಲಿ ಅನೇಕ ವೀರ ಹೋರಾಟಗಳ ಹೆಮ್ಮೆಯ ಪರಂಪರೆ ಇದೆ. ಸ್ವತಂತ್ರ ಭಾರತದಲ್ಲಿ ಭೂಸುಧಾರಣೆಗೆ ಹಲವು ಕಾನೂನುಗಳನ್ನು ರಚಿಸಲು ಕಾಂಗ್ರೆಸ್ ಆಡಳಿತ ತೊಡಗಿದ್ದಕ್ಕೆ ಮುಖ್ಯ ಕಾರಣ ಈ ಹೋರಾಟಗಳೇ. ಆದರೆ ಕಿಸಾನ ಸಭಾದ ಚಟುವಟಿಕೆ ಇದಕ್ಕಷ್ಟೇ ಸೀಮಿತವಾಗಿರಲಿಲ್ಲ. ಸಹಕಾರಿ ಸಂಘಗಳು- ಪಂಚಾಯಿತ್‌ಗಳು ಮುಂತಾದ ಸಂಸ್ಥೆಗಳನ್ನು ತಕ್ಕ ಪ್ರಜಾಸತ್ತಾತ್ಮಕ ಬಳಕೆಗೆ ತಂದು ಹಳ್ಳಿಯ ದುಡಿಯುವ ಜನರ ಸೇವೆ ಮಾಡುವುದಕ್ಕೆ ಅಖಿಲ ಭಾರತ ಕಿಸಾನ ಸಭಾ ಹೆಣಗಿದೆ.

ಕಿಸಾನ ಸಭಾದ ಇಂತಹ ಬಹುರೂಪಿ ಚಟುವಟಿಕೆಗಳಿಂದಾಗಿಯೇ, ಪಶ್ಚಿಮ ಬಂಗಾಳ ಮತ್ತು ಕೇರಳದ ಎಡರಂಗ ಸರ್ಕಾರಗಳು ಪ್ರಗತಿ ಪರ ಭೂ ಸುಧಾರಣಾ ಕಾನೂನುಗಳನ್ನು ಜಾರಿಗೆ ತರಲು ಸಾಧ್ಯವಾಗಿದೆ. ಈ ಕಾನೂನುಗಳ ಮೂಲಕ / ರೈತರಿಗೆ ಸಿಕ್ಕಿದ (ಒಕ್ಕಲೆಬ್ಬಿಸುವುದರಿಂದ ಪರಿಹಾರ, ಗೇಣಿಯ ದರದಲ್ಲಿ ಕಡಿತ, ಹೆಚ್ಚುವರಿ ಜಮೀನುಗಳ ವಿತರಣೆ ಮುಂತಾದ) ತತ್‌ಕ್ಷಣದ ಪರಿಹಾರಗಳು ರೈತರಲ್ಲಿ ಆತ್ಮವಿಶ್ವಾಸ ತಂದವು. ಇನ್ನೂ ಹೆಚ್ಚಿನ ಸಾಮರ್ಥ್ಯದ ಸಂಘಟನೆ ಕಟ್ಟುವುದರಿಂದ ಮತ್ತು ಹೋರಾಟಗಳಿಂದ ತಮ್ಮ ಜೀವನ ಮಟ್ಟ ಸುಧಾರಿಸಲು ಸಾಧ್ಯ ಎಂಬ ಭಾವನೆ ರೈತರಲ್ಲಿ ಮೂಡಿತು.

ಇದಕ್ಕೆ ಸಮಾನಾಂತರವಾಗಿ—ಕೈಗಾರಿಕಾ ಕಾರ್ಮಿಕರು, ಮಧ್ಯಮ—ವರ್ಗದ ಉದ್ಯೋಗಿಗಳು, ಕಸುಬುದಾರರು, ಸ್ವ-ಉದ್ಯೋಗಿ ಉತ್ಪಾದಕರು—ಮುಂತಾದ ದುಡಿಯುವ ಜನರ ಸಂಘಟನೆಗಳು ಹೋರಾಟಗಳು ಇವೆ. ಪ್ರತಿಯೊಂದು ದುಡಿಯುವ ಜನವಿಭಾಗ ತನ್ನದೇ ಆದ ಬೇಡಿಕೆಗಳಿಗೆ ಹೋರಾಡುವುದು ಮಾತ್ರವಲ್ಲದೇ ಉಳಿದವರ ಜತೆ ಸಹಕರಿಸುತ್ತದೆ. ಈ ಎಲ್ಲಾ ಜನವಿಭಾಗಗಳು ಹೋರಾಟಗಳಿಂದ ಕೆಲವು ತತ್‌ಕ್ಷಣದ ಪರಿಹಾರ ಗಳಿಸುತ್ತವೆ. ಆದರೆ ಹೋರಾಟಗಳು ಅವರ ಪ್ರಜ್ಞೆ ಮತ್ತು ಸಂಘಟನೆಯನ್ನು ಬಲಪಡಿಸುತ್ತದೆ.

ಬಂಡವಾಳಶಾಹಿ ಸಮಾಜದಲ್ಲಿ ಬೆಳೆಯುತ್ತಿರುವ ವರ್ಗ ಹೋರಾಟಗಳ ಬಗ್ಗೆ 'ಕಮ್ಯುನಿಸ್ಟ್ ಮೆನಿಫೆಸ್ಟೊ' ದಲ್ಲಿ ಮಾರ್ಕ್ಸ್ ಮತ್ತು ಎಂಗಲ್ಸ್ ಹೀಗೆನ್ನುತ್ತಾರೆ.

"ಆಗೊಮ್ಮೆ, ಈಗೊಮ್ಮೆ ಕಾರ್ಮಿಕರು ಗೆಲ್ಲಬಹುದು. ಆದರೆ ಆ ಗೆಲುವು ತಾತ್ಕಾಲಿಕ. ಅವರ ಹೋರಾಟಗಳ ನಿಜವಾದ ಫಲ, ತತ್‌ಕ್ಷಣದ ಸಮಸ್ಯೆಗಳ ಪರಿಹಾರವಲ್ಲ, ನಿರಂತರ ಬೆಳೆಯುತ್ತಿರುವ ಕಾರ್ಮಿಕರ ಸಂಘಟನೆ".

ಭಾರತೀಯ ರೈತರು ಒಂದು ವರ್ಗವಾಗಿ, ಭಾರತದ ದುಡಿಯುವ ವರ್ಗದ ಭಾಗವಾಗಿ, ಜನತಾ ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ ದೊಡ್ಡ ಶಕ್ತಿಯಾಗಲು ಸಿದ್ಧತೆ ನಡೆಸಿದೆ ಎಂಬುದು, ಅಖಿಲ ಭಾರತ ಕಿಸಾನ ಸಭಾದ 52 ವರ್ಷಗಳ ಕೆಲಸದ ಮುಖ್ಯ ಫಲ. ಪಶ್ಚಿಮ ಬಂಗಾಳ ಮತ್ತು ಕೇರಳಗಳಲ್ಲಿ ಎಡರಂಗ ಸರ್ಕಾರಗಳು ಕಾನೂನುಗಳನ್ನು ತಂದಿರುವುದು ಇದಕ್ಕೆ ಪೂರಕ ಅಂಶ.

ನಿರುದ್ಯೋಗ ವಿರೋಧಿ ಮಾಚರಣೆ

ಬೆಂಗಳೂರು

ಭಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಷನ್(ಡಿ.ವೈ.ಎಫ್.ಐ)ನ ಕೇಂದ್ರ ಸಮಿತಿ ಕರೆಯಂತೆ ನಿರುದ್ಯೋಗ ವಿರೋಧಿ ಮಾಚರಣೆ ಅಂಗವಾಗಿ ಬೆಂಗಳೂರು ಜಿಲ್ಲಾ ಸಮಿತಿ ಆಶ್ರಯದಲ್ಲಿ ಮಾರ್ಚ್ 26ರಂದು ಟಿ. ದಾಸರಹಳ್ಳಿಯಲ್ಲಿ ನಿರುದ್ಯೋಗ ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು. ರಾಜ್ಯ ಅಧ್ಯಕ್ಷರಾದ ಕಾ॥ ನಾಗಮೋಹನದಾಸ್‌ರವರು ಉಪನ್ಯಾಸ ನೀಡಿದರು. ಜಿಲ್ಲಾ ಅಧ್ಯಕ್ಷ ಶ್ರೀನಿವಾಸ್ ಅಧ್ಯಕ್ಷತೆ ವಹಿಸಿದ್ದರು. ಮಾರ್ಚ್ 27ರಂದು ಪಂತರ ಪಾಳ್ಯದಲ್ಲಿ ಸಂಜೆ ಪಾಠಶಾಲೆ ವಾರ್ಷಿಕ ಸಮಾರಂಭ ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪನವರು ಹಾಗೂ ನಾಗಮೋಹನ್ ದಾಸ್‌ರವರು ಮಾತನಾಡಿದರು. ಮಹದೇವ್ ಕುಮಾರ್ ವಾರ್ಷಿಕವರದಿ ಮಂಡಿಸಿದರು. ಪಾಠಶಾಲೆ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಯಿತು.

ಮಾರ್ಚ್ 28ರಂದು ಚಿಕ್ಕಲಾಲ್ ಬಾಗ್‌ನಿಂದ ಜಿಲ್ಲಾಧಿಕಾರಿ ಕಛೇರಿಗೆ ಮೆರವಣಿಗೆಯಲ್ಲಿ ಘೋಷಣೆ ಕೂಗುತ್ತಾ, ಬಂದ ಕಾರ್ಯಕರ್ತರು ಧರಣಿ ಸತ್ಯಾಗ್ರಹ ನಡೆಸಿ ಜಿಲ್ಲಾಧಿಕಾರಿಯವರಿಗೆ ಮನವಿ ಪತ್ರ ಸಲ್ಲಿಸಿದರು.

ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಬೇಕು, ಎಲ್ಲಾ ಹಂಗಾಮಿ ನೌಕರರನ್ನು ಖಾಯಂಗೊಳಿಸಬೇಕು. ಉಕ್ಕಿನ ಕಾರ್ಖಾನೆ, ತೈಲಾಗಾರ ಸ್ಥಾಪಿಸಬೇಕು, ಖಾಲಿ ಇರುವ ಎಲ್ಲಾ ಸರ್ಕಾರಿ ಹುದ್ದೆಗಳನ್ನು ಭರ್ತಿಮಾಡಬೇಕೆಂಬ ಬೇಡಿಕೆಗಳ ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಅದನ್ನು ರವಾನಿಸುವುದಾಗಿ ನಿಯೋಗಕ್ಕೆ ತಿಳಿಸಿದರು.

ನಂತರ ನಡೆದ ಸಭೆಯಲ್ಲಿ ರಾಜ್ಯ ಕಾರ್ಯದರ್ಶಿ ಕಾ॥ ಎಸ್, ಶಿವರಾಂ ಜಿಲ್ಲಾ ಕಾರ್ಯದರ್ಶಿ ಟಿ. ಶಿವಶಂಕರ್ ಅಧ್ಯಕ್ಷ ಶ್ರೀನಿವಾಸ್ ಮಾತನಾಡಿದರು.

ಕುಂದಾಪುರ ತಾಲ್ಲೂಕು ಸಮಿತಿ ಆಶ್ರಯದಲ್ಲಿ ಮಾರ್ಚ್ 27ರಂದು ತಾಲ್ಲೂಕಿನಾದ್ಯಂತ ಯುವ ಜನರ ಬೃಹತ್ ಸೈಕಲ್ ರ್‍ಯಾಲಿ ಹೊರಟು ಸಾಲಿಗ್ರಾಮ ಸುತ್ತಿ ಸಾರ್ವಜನಿಕ ಸಭೆ ಜರುಗಿತು. ಸರ್ವರಿಗೂ ಶಿಕ್ಷಣ; ಉದ್ಯೋಗ, ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಲಿ ಬೇಡಿಕೆಗಳ ಕುರಿತು ವಿವರಿಸಲಾಯಿತು.

ಸಭೆಯನ್ನುದ್ದೇಶಿಸಿ ಡಿ.ವೈ.ಎಫ್.ಐ. ಮುಖಂಡರಾದ ಕಾ॥ ಕೆ. ಮಹಾಬಲ ವಡೇರ ಹೋಬಳಿ, ವೆಂಕಟೇಶ ನಾಯಕ, ನಾರಾಯಣ ಆಚಾರ್‌ರವರುಗಳು ಮಾತನಾಡಿದರು.

ಭಗತ್‌ಸಿಂಗ್ ದಿನಾಚರಣೆ

ರಾಂಪುರದಲ್ಲಿ ಮಾರ್ಚ್ 23ರಂದು ಭಗತ್‌ಸಿಂಗ್ ದಿನಾಚರಣೆ ಅಂಗವಾಗಿ ಡಿ ವೈ.ಎಫ್.ಐ. ಮೊಳಕಾಲ್ಮೂರು ತಾಲ್ಲೂಕು ಮಟ್ಟದ 20 ತಂಡಗಳು 200 ಕ್ರೀಡಾ ಸ್ಪರ್ಧಿಗಳು ಪಾಲ್ಗೊಂಡಿದ್ದ ಕಬ್ಬಡಿ ಟೋರ್ನಮೆಂಟನ್ನು ಕಾ॥ ವಿ.ಜೆ.ಕೆ. ನಾಯರ್‌ರವರು ಉದ್ಘಾಟಿಸಿದರು.

ಸಾವಿರಕ್ಕೂ ಮೀರಿದ ಕ್ರೀಡಾಭಿಮಾನಿಗಳು ಈ ಪಂದ್ಯಾವಳಿಗಳನ್ನು ವೀಕ್ಷಿಸಿದರು.

ಕಾ॥ ವಿ.ಜೆ.ಕೆ.ಯವರು ಮಾತನಾಡಿ ಇಂದಿನ ಯುವ ಜನಾಂಗ ವಿಚ್ಛಿದ್ರಕಾರಿ ಶಕ್ತಿಗಳಿಂದ ದೇಶ ಎದುರಿಸುತ್ತಿರುವ ಗಂಡಾಂತರಕಾರಿ ಪರಿಸ್ಥಿತಿ ಬದಲಿಗಾಗಿ ದೇಶದ ಐಕ್ಯತೆ ಕಾಪಾಡಲು ಮುಂದಾಗಬೇಕೆಂದು ಕರೆ ನೀಡಿದರು.

ಭಗತ್‌ಸಿಂಗ್ ಬ್ರಿಟಿಷ್ ಸಾಮ್ರಾಜ್ಯಶಾಹಿ ಸಂಕೋಲೆಯಿಂದ ಭಾರತದ ವಿಮೋಚನೆಗಾಗಿ ನಡೆಸಿದ ಧೀರೋದಾತ್ತ ಹೋರಾಟವನ್ನು ಯುವಜನತೆ ನೆನಪಿಸಿಕೊಂಡು ಬಲಿಷ್ಠಯುವ ಸಂಘಟನೆ ಕಟ್ಟಲು ಮುಂದಾಗಿರೆಂದು ಕರೆ ನೀಡಿದರು.

ವೀರಭದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾ॥ ನಿತ್ಯಾನಂದಸ್ವಾಮಿಯವರು ಮಾತನಾಡಿದರು. ಕಾ॥ ಯು. ಷಣ್ಮುಖಪ್ಪ ಮೊದಲಿಗೆ ಧ್ವಜಾರೋಹಣ ಮಾಡಿದರು. ಇಡೀಯಾಗಿ ರಾಂಪುರದಲ್ಲಿ ಕ್ರೀಡಾ ಮಹೋತ್ಸವ ಜನರಲ್ಲಿ ಉತ್ಸಾಹ–ಸಡಗರದ ವಾತಾವರಣ ನಿರ್ಮಿಸಿತು.

ಇಷ್ಟು ದೊಡ್ಡದಾದ ಕ್ರೀಡಾ ಸ್ಪರ್ಧೆ ಮೊದಲ ಬಾರಿಯದಾಗಿದೆ.

ರಾಂಪುರ ಡಿ.ವೈ.ಎಫ್ ಐ.ನ 'ಭಗತ್‌ಸಿಂಗ್' ತಂಡ ಪ್ರಥಮಸ್ಥಾನ ಮೊಳಕಾಲ್ಮೂರು 'ಎ' ತಂಡಗಳು ದ್ವಿತೀಯ ಸ್ಥಾನ ಪಡೆದವು. ಸಂಜೆ ನಡೆದ ಬಹುಮಾನ ವಿತರಣೆ ಸಮಾರಂಭದಲ್ಲಿ ಡಾ॥ ಶಿವರುದ್ರಪ್ಪ, ಡಾ॥ ಪಾಟೀಲ್, ಡಾ॥ ಸೋಮಶೇಖರ್ ಹಾಗೂ ಡೆಪ್ಯುಟಿ ತಹಸೀಲ್ದಾರ್‌ರವರುಗಳು ಭಾಗವಹಿಸಿದ್ದರು.

ಬೀಡಿ ಕಾರ್ಮಿಕರ ಸಭೆ

ಮೂಡಬಿದ್ರೆ ಬೀಡಿ ಕೆಲಸಗಾರರ 3ನೇ ವಾರ್ಷಿಕ ಮಹಾಸಭೆ ಮಾರ್ಚ್ 11ರಂದು ಅಧ್ಯಕ್ಷ ಕಾ॥ ಯು.ಬಿ, ಲೋಕಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು.

ಲಾಗ್ ಪುಸ್ತಕ ಕಾರ್ಮಿಕರ ಕೈಯಲ್ಲಿ ಕೊಡದಿರುವುದು, ಎಲೆ ಎವರೇಜ್ ಹೆಸರಿನಲ್ಲಿ ದಂಡ ವಸೂಲಿ, ಕಡಿಮೆ ಮಜೂರಿ ನೀಡುವ ಕಂಟ್ರಾಕ್ಟದಾರರ ವಿರುದ್ಧ ಠರಾವು ಅಂಗೀಕರಿಸಿ, ಬೇಡಿಕೆಗೆ ಒತ್ತಾಯಿಸಿ ಹೋರಾಟ ರೂಪಿಸಲು ನಿರ್ಣಯಿಸಲಾಯಿತು.

ಮುಂದಿನ ಸಾಲಿಗೆ ಯು.ಬಿ. ಲೋಕಯ್ಯ (ಅಧ್ಯಕ್ಷ) ಶ್ರೀಮತಿ ರವಿಕಾಳ (ಉಪಾಧ್ಯಕ್ಷ) ಕುಮಾರಿ ರಮಣಿ (ಕಾರ್ಯದರ್ಶಿ) ಜೆ. ಬಾಲಕೃಷ್ಣಶೆಟ್ಟಿ. (ಜೊತೆ ಕಾರ್ಯದರ್ಶಿ) ಶ್ರೀಮತಿ ಅಹಲ್ಯ ಕೋಶಾಧಿಕಾರಿ,

ಎಲ್ಲಿದೆ ಟಿ. ಎನ್. ವಿ. ಈಗ?

ನೃಪೇನ್ ಚಕ್ರವರ್ತಿ

ಒಂದು ಪ್ರಶ್ನೆ ತ್ರಿಪುರಾ ರಾಜ್ಯದ ಮಾತ್ರವಲ್ಲ, ದೇಶದ ಎಲ್ಲಾ ಜನರನ್ನು ಕಾಡುತ್ತಿದೆ. ತ್ರಿಪುರಾ ವಿಧಾನಸಭೆ ಚುನಾವಣೆಗಳಿಗೆ ಕೇವಲ 10 ದಿನಗಳ ಮೊದಲು 93 ಬಂಗಾಲಿ ಮಕ್ಕಳು ಹೆಂಗಸರು, ಯುವಕರು ಮುದುಕರನ್ನು ನಿರ್ದಯವಾಗಿ ಕಗ್ಗೊಲೆ ಮಾಡಿದ TNV (Tribal National Volunters-ಆದಿವಾಸಿ ರಾಷ್ಟ್ರೀಯ ಸ್ವಯಂಸೇವಕರು) ಎಲ್ಲಿದ್ದಾರೆ ಎಂಬುದು ಆ ಪ್ರಶ್ನೆ. ಕಳೆದ ಎರಡು ತಿಂಗಳುಗಳಲ್ಲಿ ಈ ಅರೆ-ಫ್ಯಾಸಿಸ್ಟ್ ನರಭಕ್ಷಕರು ಇದ್ದಕ್ಕಿದ್ದ ಹಾಗೇ ಗಾಂಧಿಜೀಯ ಪರಮ ಶಿಷ್ಯರಾದರೆ? ಕಳೆದ ಎರಡು ತಿಂಗಳುಗಳಲ್ಲಿ ಇವರಿಂದ ಒಂದು ಕೊಲೆಯೂ ನಡೆದಿಲ್ಲ.

ಇಡೀ ರಾಜ್ಯವನ್ನು 'ಗಲಭೆ ಪೀಡಿತ ಪ್ರದೇಶ' ಎಂದು ಘೋಷಿಸೀ ಸೈನ್ಯ ತ್ರಿಪುರಾಕ್ಕೆ ಹೊಕ್ಕಿದ್ದರೂ, TNV ತ್ರಿಪುರಾ ಬಿಟ್ಟು ಓಡಿ ಹೋಗಿಲ್ಲ. ಹಾಗಿದ್ದರೆ ಇವರು ಎಲ್ಲಿದ್ದಾರೆ? ಚೌಮಾನು ಹಳ್ಳಿಯ ಆದಿವಾಸಿಗಳ ಪ್ರಕಾರ, ಚೌಮಾನು ಬಜಾರ್‌ನಲ್ಲಿರುವ ಮಿಲಿಟರಿ ಕ್ಯಾಂಪ್‌ನಲ್ಲಿ ಸೈನಿಕರ ಜತೆಗೆ TNV ಕಾರ್ಯಕರ್ತರು ಇಸ್ಪೀಟು ಆಡುತ್ತಿದ್ದಾರೆ. ಟಿ.ವಿ. ವಿಡಿಯೋ ನೋಡುತ್ತಾ ಮೋಜಿನಲ್ಲಿ ತೊಡಗಿದ್ದಾರೆ. ಅವರೂ ಸಂತೋಷದಲ್ಲಿರುವುದು ಸಹಜವೇ. ಮಿಲಿಟರಿ, ಅರೆ-ಮಿಲಿಟರಿ ಸಹಾಯದಿಂದ ಅದಕ್ಕಿಂತಲೂ ಹೆಚ್ಚಾಗಿ ರಾಜೀವ ಗಾಂಧಿ ಆಶೀರ್ವಾದದಿಂದ ಎಡರಂಗ ಸರ್ಕಾರ ಉರುಳಿಸಲು ಸಾಧ್ಯವಾಗಿರುವುದು, ಇವರೆಲ್ಲರೂ ಸೇರಿ ಮೋಜು ಮಾಡುವುದಕ್ಕೆ ಸ್ವಾಭಾವಿಕವಾದ ಸಂದರ್ಭ.

ಕಾಂಗ್ರೈ ಶಿಶು

ಸಿ.ಪಿ.ಐ (ಎಂ) ಹಿಂದಿನಿಂದಲೂ TNV, TUJS ನ ಶಿಶು ಎಂದು ಹೇಳುತ್ತಾ ಬಂದಿದೆ. ಇದು ಹುಟ್ಟಿದ್ದು TUJS, ಆಮರಾ ಬಂಗಾಲಿ ಮತ್ತು ಕಾಂಗ್ರೆಸ್(ಐ)ಗಳು ಸಕ್ರಿಯವಾಗಿ ಭಾಗವಹಿಸಿದ 1980 ರಲ್ಲಿ ನಡೆದ ಆದಿವಾಸಿ_ಆದಿವಾಸೇತರ ಕೋಮು ಗಲಭೆಗಳಲ್ಲಿ. ಪ್ರಧಾನ ಮಂತ್ರಿ ರಾಜೀವ ಗಾಂಧಿ ಮತ್ತು ಅವರ ಪಕ್ಷ TNV ಯನ್ನು ಪೋಷಿಸುತ್ತಲೇ ಬಂದಿದೆ. ಯಾಕೆಂದರೆ TNV ಕಾಂಗ್ರೆಸ್(ಐ)ಗೆ ಯಾವುದೇ ಹಾನಿ ಉಂಟು ಮಾಡುತ್ತಿರಲಿಲ್ಲ. ಅವರು ಕೊಲ್ಲುತ್ತಿದ್ದುದು ಸಿ.ಪಿ.ಐ.(ಎಂ) ಮತ್ತು ಗಣಮುಕ್ತಿ ಪರಿಷತ್‌ನ ಕಾರ್ಯಕರ್ತರು, ನಾಯಕರು ಬೆಂಬಲಿಗರನ್ನು ಮಾತ್ರ. TUJS ಆಗಲಿ ಕಾಂಗ್ರೆಸ್ (ಐ) ಆಗಲಿ TNV ನ ಕೊಲೆ ಪಾತಕತನವನ್ನು ಯಾವತ್ತೂ ಖಂಡಿಸಿದ್ದಿಲ್ಲ. ಅದಕ್ಕೆ ಬದಲಾಗಿ ಇಂತಹ ನರಮೇಧಗಳು ನಡೆದಾಗಲ್ಲೆಲ್ಲಾ, ಈ ಸಂದರ್ಭವನ್ನು ಎಡರಂಗ ಸರ್ಕಾರದ ವಿರುದ್ಧ ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಿ ಕ್ರಮ ಕೈಗೊಳ್ಳಬೇಕೆಂದು ಆಗ್ರಹ ಪಡಿಸಲು ಉಪಯೋಗಿಸಿಕೊಳ್ಳುತ್ತಿದ್ದರು. ಇದು 1980ರಲ್ಲಿ ಆರಂಭವಾಗಿ ಇತ್ತೀಚಿನ ಚುನಾವಣೆ ವರೆಗೆ ಮುಂದುವರಿಯಿತು.

ಕಳೆದ ಮೂರು ವರ್ಷಗಳಲ್ಲಿ ತ್ರಿಪುರಾದಲ್ಲಿ ಸೈನ್ಯದ ಪಾತ್ರ ನಾಚಿಕೆಗೇಡಿನದು. TNV ಭಯೋತ್ಪಾದಕರು ಗಡಿಯಾಚೆಗೆ ಬಾಂಗ್ಲಾದೇಶದಲ್ಲಿ ಕೆಲವೇ ಕಿ. ಮೀ. ಗಳ ಒಳಗೆ ಮುಖ್ಯ ನೆಲೆಗಳನ್ನು ಹೊಂದಿದ್ದರೂ, ಒಬ್ಬನೇ TNV ಭಯೋತ್ಪಾದನನ್ನು ಗಡಿ ದಾಟುವಾಗ ಹಿಡಿಯಲು ಸಾಧ್ಯವಾಗಲಿಲ್ಲ. ತ್ರಿಪುರಾದ ಬಜಾರುಗಳಲ್ಲಿ TNV ಲೂಟಿ ಹೊಡೆದ ಸಾಮಾನುಗಳನ್ನು ಮುಖ್ಯ ನೆಲೆಗೆ ಗಡಿಯಾಚೆಗೆ ಸಾಗಿಸುವುದನ್ನು ತಡೆಯಲು ಸಾಧ್ಯವಾಗಿಲ್ಲ. ಕೇಂದ್ರ ಮೀಸಲು ಪೋಲಿಸ್ ಪಡೆ (CRPF) ಆಗಲಿ, ಅಸ್ಸಾಂ ರೈಫಲ್ಸ್ ಆಗಲಿ TNV ಜತೆ ಒಂದೇ ಒಂದು ಬಾರಿ ಸಹ ಕಲಹಕ್ಕೆ ತೊಡಗಲಿಲ್ಲ. ಈ ಎರಡೂ ಪಡೆಗಳೂ ಇದ್ದಾಗ್ಯೂ TNV ಭಯೋತ್ಪಾದಕರು ಆದಿವಾಸಿ ಪ್ರದೇಶಗಳಲ್ಲಿ ಆರಾಮಾಗಿ ಓಡಾಡುತ್ತಿದ್ದಾರೆ. CRPF ಅಥವಾ ಅಸ್ಸಾಂ ರೈಫಲ್ಸ್ ಕ್ಯಾಂಪ್ ಹಾಕಿರುವ 1_2 ಕಿ.ಮೀ. ಗಳೊಳಗೆ ಅಮರ್‌ಪುರ್‌ಕ, ಮಲಾಪುರ್, ಸದರ ಮತ್ತಿತರ ಸ್ಥಳಗಳಲ್ಲಿ ಸಾಮೂಹಿಕ ನರಮೇಧ ನಡೆದಿರುವುದು. ಆದರೂ ಈ ಅರೆ-ಮಿಲಿಟರಿ ಪಡೆಗಳು ಕ್ಯಾಂಪು ಬಿಟ್ಟು ಹೊರಕ್ಕೆ ಬರುತ್ತಿರಲಿಲ್ಲ. ಕತ್ತಲೆಯಾದನಂತರ TNV ಚಲನವಲನಗಳ ವರದಿ ಬಂದರೂ ಬರದಂತೆ ಈ ಪಡೆಗಳಿಗೆ ಅವರ ಕಮಾಂಡರನ ಆಜ್ಞೆ ಇತ್ತು.

ಅರೆ—ಮಿಲಿಟರಿ ಪಡೆಗಳ ನಿಷ್ಕ್ರಿಯತೆಯ ಬಗ್ಗೆ ಕೇಂದ್ರ ಗೃಹ ಸಚಿವಾಲಯಕ್ಕೆ ತಿಳಿಸಿದಾಗ, ಸೈನ್ಯವನ್ನು ಕಳುಸುವುದು ಒಂದೇ ಪರಿಹಾರ ಎಂಬುದು ಅವರ ಏಕಮಾತ್ರ ಸಲಹೆಯಾಗಿತ್ತು. ತ್ರಿಪುರಾಕ್ಕೆ ಸೈನ್ಯವನ್ನು ಕಳಿಸುವುದನ್ನು ಎಡರಂಗ ಯಾವಾಗಲು ವಿರೋಧಿಸುತ್ತಾ ಬಂದಿದೆ. ಒಂದು ಚಿಕ್ಕ ಹಿಂದುಳಿದ ಜನಾಂಗದ ಮೇಲೆ ಸೈನ್ಯವನ್ನು ಹರಿಯಬಿಡುವುದು, ಅವರ ಮೇಲೆ ಯುದ್ಧ ಘೋಷಿಸಿದಂತೆ. ಇದಕ್ಕೆ ಎಡರಂಗ ಒಪ್ಪಲಾರದು; ಪ್ರಧಾನ ಮಂತ್ರಿಗಳು ತ್ರಿಪುರಾದ ಮತದಾರರಿಗೆ ತಿಳಿಸಿದಂತೆ "TNV" ಮೇಲೆ ದೃಢ ಕಾರ್ಯಾಚರಣೆ ನಡೆಸಲು ಸೈನ್ಯ ಬಂದಿಲ್ಲ ಎಂಬುದು ಚಿಕ್ಕ ಮಕ್ಕಳಿಗೂ ಅರ್ಥವಾಗಿದೆ. ಕಳೆದ ಒಂದು ತಿಂಗಳ ಘಟನೆಗಳಿಂದ ಅದು ನಿಜವಾಗಿಯೂ ಬಂದಿರುವುದು ಸಿ.ಪಿ.ಐ (ಎಂ), ಗಣಮುಕ್ತಿ ಪರಿಷತ್ ಮತ್ತು ಎಡರಂಗದ ಮೇಲೆ "ಧೃಡ ಕಾರ್ಯಾಚರಣೆ" ನಡೆಸಲು.

ಜನರ ವಿರುದ್ಧ ಯುದ್ಧ ದೃಢ

TNV ಭಯೋತ್ಪಾದಕರು ಮತ್ತು ಅವರ ಜತೆ ಶಾಮೀಲಾಗಿರುವವರ ಬಗ್ಗೆ ರಾಜ್ಯ ಪೋಲಿಸು ಮತ್ತು ಗೃಹ ಸಚಿವಾಲಯದಲ್ಲಿ ಶೇಖರಿಸಲಾಗಿರುವ ದಾಖಲೆಗಳ ಬಗ್ಗೆ ಪ್ರಧಾನ ಮಂತ್ರಿ ಅಥವಾ ಸೈನ್ಯ ತಲೆಕೆಡಿಸಿಕೊಂಡಿಲ್ಲ. ಇದನ್ನು ಉಪಯೋಗಿಸಿ TNV ಭಯೋತ್ಪಾದಕರನ್ನು, ಅವರ ಸಹಾಯಕರನ್ನು ಗುರುತಿಸುವ ಕೆಲಸದಲ್ಲಿ ಅವರಿಗೆ ಆಸಕ್ತಿ ಇಲ್ಲ. ಇದರ ಬದಲು ಪ್ರಧಾನ ಮಂತ್ರಿ ಅವರ ನೇರ ನಿಯಂತ್ರಣದಲ್ಲಿರುವ RAW ಎಂಬ ಪತ್ತೇದಾರಿ ವಿಭಾಗ ಸೈನ್ಯಕ್ಕೆ ಆದಿವಾಸಿ ಪ್ರದೇಶಗಳಲ್ಲಿ 'ಕೆಂಪು ಬಾವುಟ'ದ ಪ್ರಬಲ ಪ್ರದೇಶವನ್ನು ಗುರುತಿಸುವ ಬಗ್ಗೆ ಸೈನ್ಯಕ್ಕೆ ಸಹಾಯ ಮಾಡುತ್ತಿದೆ. 1950ರಿಂದ ಆದಿವಾಸಿ ಪ್ರದೇಶಗಳಲ್ಲಿ ಬಲವಾಗಿ ಬೇರೂರಿರುವ, ಎಷ್ಟೋ ಎಡರು ತೊಡರುಗಳನ್ನು ಎದುರಿಸಿರುವ 'ಕೆಂಬಾವುಟ'ವನ್ನು ಬೇರೆ ಯಾವುದೇ ರೀತಿಯಲ್ಲಿ ಕ್ಷೀಣಿಸಲು ಸಾಧ್ಯವಿಲ್ಲ ಎಂದು ಅವರಿಗೆ ಗೊತ್ತಾಗಿದೆ.

ಸೈನ್ಯ ಬಂದ ನಂತರ ನಾಗರಿಕ, ಪ್ರಜಾಸತ್ತಾತ್ಮಕ ಹಕ್ಕುಗಳು, ಸಂವಿಧಾನ ಕೊಟ್ಟಿರುವ ಇತರ ಮಾನವ ಅಧಿಕಾರಗಳು ಮಾಯವಾಗಿವೆ. ಝೂಮಿಯಾಗಳು ಕೆಲಸಕ್ಕೆ ಹೋಗಲು ಆಗುತ್ತಿಲ್ಲ. ಆದಿವಾಸಿ ಮಹಿಳೆಯರ ಮೇಲೆ ಅತ್ಯಾಚಾರವೆಸಗಲಾಗುತ್ತಿದೆ, ಅತ್ಯಾಚಾರದ ಭಯದಿಂದ ಅವರು ನೀರು ತರಲೂ ಹೊರಗೆ ಬರಲಾಗುತ್ತಿಲ್ಲ. ಭಾಂದರಿಮಾ ಗಾಂವ್ ಸಭಾದ ಪ್ರಧಾನರನ್ನು ಬಂಧಿಸಲಾಗಿದೆ. ಎರಡು ವಾರಗಳು ಕಳೆದ ಮೇಲೂ ಅವರ ಸುಳಿವಿಲ್ಲ. ಸೈನ್ಯ ಇರುವ ಪ್ರದೇಶಗಳಲ್ಲಿ ರಾಜ್ಯ ಸರ್ಕಾರಕ್ಕೆ ಯಾವುದೇ ಪಾತ್ರವಿಲ್ಲ. ಬಂಧಿತರನ್ನು ಕೋರ್ಟಿನಲ್ಲಿ ಹಾಜರು ಪಡಿಸಲಾಗುತ್ತಿಲ್ಲ.

ಪಾರ್ಲಿಮೆಂಟಿನಲ್ಲಿ ಕೇಂದ್ರ ರಾಜ್ಯ ಗೃಹ ಸಚಿವ ಚಿದಂಬರಂ ಸೈನ್ಯ. TNV ಜತೆ ಯಾವುದೇ ಘರ್ಷಣೆ ನಡೆದಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ತ್ರಿಪುರಾದ ಹೊಸ ಮುಖ್ಯಮಂತ್ರಿ ಸುಧೀರ್ ರಂಜನ್ ಮುಜುಂದಾರ್ ಒಂದು ಪತ್ರಿಕಾಗೋಷ್ಠಿಯಲ್ಲಿ ಇದು ಸತ್ಯವೆಂದು ಒಪ್ಪಿಕೊಂಡಿದ್ದರು. TUJS ಅಧ್ಯಕ್ಷ ಶ್ಯಾಮ್ ಚರಣ್ ತ್ರಿಪುರಾ TNV 'ಹುಡುಗ'ರನ್ನು ಹೊಗಳಲಾರಂಭಿಸಿದ್ದಾರೆ. TNV ನಾಯಕ ಬಿಜೋಯ್‌ಕುಮಾರ್ ಹ್ರಂಗಕಲ್‌ಸ್ಶೈ ಜತೆ ಮಾತುಕತೆ ನಡೆಸಲು ಎಲ್ಲಾ ತಯಾರಿ ನಡೆದಿದೆ ಎನ್ನುವ ಸೂಚನೆಗಳಿವೆ. ಈತ ಹಲವು ಬಾರಿ ರಾಜೀವ ಗಾಂಧಿ ಜತೆ ಲಾಲ್‌ಡೆಂಗಾ-ಮಾದರಿಯ ಒಪ್ಪಂದಕ್ಕೆ ಹಾತೊರೆದಿದ್ದ.

ಇತ್ತೀಚೆಗೆ ಒಂದು ಪತ್ರಿಕಾಗೋಷ್ಠಿಯಲ್ಲಿ ಮುಖ್ಯಮಂತ್ರಿ ಮುಜುಂದಾರ್ "ಎಡರಂಗದ 'ದಾಸ್ಯ'ದಿಂದ ಬಿಡುಗಡೆ ನೀಡಿ ತ್ರಿಪುರಾವನ್ನು ರಕ್ಷಿಸಿದ" ರಾಜೀವಗಾಂಧಿಯವರನ್ನು ಹೂ ಹಾರಗಳಿಂದ ತ್ರಿಪುರಾಕ್ಕೆ ಬರಮಾಡಿಕೊಳ್ಳಲಾಗುತ್ತದೆ ಎಂದು ಘೋಷಿಸಿದ್ದರು. ಈ ಮೂಲಕ, ತ್ರಿಪುರಾದ ಮತದಾರರಿಗೆ ಹಸಿ ಸುಳ್ಳುಗಳನ್ನು ಉಣಬಡಿಸಿದ ಕೇಂದ್ರ ಮಂತ್ರಿ ಸಂತೋಷ ಮೋಹನ್‌ದೇಬ್ ಕಾಂಗ್ರೈ-TUJS ಪರ ಕೆಲಸ ಮಾಡುವಂತೆ ಅರೆ-ಮಿಲಿಟರಿ ಪಡೆಗಳ ಕಮಾಂಡರ್‌ಗಳಿಗೆ ನಿರ್ದೇಶನವಿತ್ತ ಚಿದಂಬರಂ ಮತ್ತು ಪಾಣಿಗ್ರಹಿಗಳ ಸಹಾಯವಿಲ್ಲದೆ ಈ 'ವಿಜಯ' ಸಾಧ್ಯವಿರಲಿಲ್ಲ ಎಂದು ಮುಖ್ಯಮಂತ್ರಿ ಒಪ್ಪಿಕೊಂಡಂತಾಗಿದೆ ಇದರಿಂದಾಗಿ. ಅದರಲ್ಲೂ ರಾಜ್ಯ ಸರ್ಕಾರದ್ದಾಗಲಿ, ಚುನಾವಣಾ ಕಮಿಶನ್‌ನದಾಗಲಿ ಅನುಮತಿ ಇಲ್ಲದೆ ತ್ರಿಪುರಾಕ್ಕೆ ಚುನಾವಣೆ ಸಮಯದಲ್ಲಿ ಸೈನ್ಯ ನುಗ್ಗಿಸದೆ ಈ 'ವಿಜಯ' ಸಾಧ್ಯವಿರಲಿಲ್ಲ ಎಂದು ಸಹ ಒಪ್ಪಿಕೊಂಡಂತಾಗಿದೆ.

ಪ್ರಧಾನ ಮಂತ್ರಿಗಳು ಎಡರಂಗದ ಮೇಲೆ ನಡೆಸಿದ ಸುಳ್ಳು ಆಪಾದನೆಗಳ ಯುದ್ಧ ಮಾತ್ರವಲ್ಲ, ಚುನಾವಣೆಯ ಮೂರು ದಿನಗಳ ಮೊದಲು ಸಂವಿಧಾನ ಮೇಲೆ ನಡೆಸಿದ ಅತ್ಯಾಚಾರವನ್ನು ಜನತೆ ನೋಡಿದ್ದಾರೆ. ಅವರು ಹೇಗೆ ಇಡೀ ಚುನಾವಣಾ ಯಂತ್ರ ಮಿಲಿಟರಿಯ ಕೈಯಲ್ಲಿ ಬದ್ಧಿತ್ತು ಎಂದೂ ನೋಡಿದ್ದಾರೆ. ತ್ರಿಪುರಾದ ಜನತೆ ಪಂಜಾಬಿನಲ್ಲಿ ಖಲಿಸ್ತಾನಿಗಳ ಜತೆ ಸೇರಿರುವ, ತ್ರಿಪುರಾದಲ್ಲಿ TNV ಜತೆ ಶಾಮೀಲಾಗಿರುವ ಪ್ರಧಾನ ಮಂತ್ರಿಯ ಬುರುಡೆಗಳನ್ನು ನಂಬುವುದಿಲ್ಲ. TNVಯ ಶೃಂಗಕಲೆ ಜತೆ ಪ್ರಧಾನಿ "14 ಅಂಶಗಳ ಬೇಡಿಕೆ"ಗಳ ಆಧಾರದ ಮೇಲೆ ಒಪ್ಪಂದ ಮಾಡಿಕೊಂಡರೆ ಅವರಿಗೆ ಆಶ್ಚರ್ಯವಾಗುವುದಿಲ್ಲ.

ವೃದ್ಧ ಮಹಿಳೆಗೆ ಠಾಣೆಯಲ್ಲಿ ಚಿತ್ರಹಿಂಸೆ ವಿರೋಧಿಸಿ

ಡಿ. ವೈ. ಎಫ್. ಐ. ಹೋರಾಟಕ್ಕೆ ಜಯ

ಮಂಗಳೂರಿನಲ್ಲಿರುವ ಉರ್ವಾ ಪೋಲಿಸ್ ಠಾಣೆಯಲ್ಲಿ ಮಾರ್ಚ್ 12 ರಂದು ಸೇಸಮ್ಮನೆಂಬ 60 ವರ್ಷ ವಯಸ್ಸಿನ ವೃದ್ಧೆಯನ್ನು ಲಾಠಿಯಿಂದ ಹೊಡೆದು, ಪಕ್ಕೆಗಳಿಗೆ ತಿವಿದು, ಮಂಜುಗಡ್ಡೆಯ ಮೇಲೆ ನಿಲ್ಲಿಸುವುದು ಮುಂತಾದ ನಾನಾ ರೀತಿಯ ಚಿತ್ರಹಿಂಸೆ ನೀಡಿದ ಪೋಲಿಸರ ಅಮಾನುಷ ಕೃತ್ಯದ ವಿರುದ್ಧ ಡಿ.ವೈ.ಎಫ್.ಐ, ಮಂಗಳೂರು ತಾಲ್ಲೂಕು ಸಮಿತಿ ಸಾವಿರಾರು ಯುವಜನತೆಯನ್ನು ಹೋರಾಟಕ್ಕಿಳಿಸಿದ ವರದಿ ಬಂದಿದೆ.

ಮನೆಯ ಮಾಲೀಕನೊಬ್ಬನ ಮನೆಯಲ್ಲಿ ಸೇಸಮ್ಮ ಕಳವು ಮಾಡಿರುವಳೆಂಬ ಆರೋಪ ಹೊರಿಸಿ ಆಕೆಯ ಮೇಲೆ ದೈಹಿಕ ಹಾಗೂ ಮಾನಸಿಕ ಚಿತ್ರಹಿಂಸೆ ನೀಡಿದ ಪೋಲೀಸರ ಮೇಲೆ ಸಂಬಂಧಪಟ್ಟ ಅಧಿಕಾರಿಗಳು ಈ ಕೂಡಲೇ ಕಠಿಣ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿ ಮಾರ್ಚ್ 20 ರಂದು 2500ಕ್ಕೂ ಮೀರಿದ ಬೃಹತ್ ಜನರ ಪ್ರತಿಭಟನಾ ಪ್ರದರ್ಶನವನ್ನು ಉರ್ವಾ ಪೊಲೀಸ್ ಠಾಣೆ ಎದುರು ಸಂಘಟಿಸಲಾಯಿತು.

ರಾಜ್ಯ ಡಿ.ವೈ.ಎಫ್.ಐ, ಉಪಾಧ್ಯಕ್ಷ ಕಾ॥ ಸುನೀಲ್ ನಟೇಕರ್ ಸಭೆಯನ್ನುದ್ದೇಶಿಸಿ ಮಾತನಾಡಿ ಹಲ್ಲೆ ನಡೆಸಿದ ಪೊಲೀಸರ ವಿರುದ್ಧ ಕ್ರಮ ಜರುಗಿಸದಿದ್ದರೆ ಜಿಲ್ಲೆಯಾದ್ಯಂತ ತೀವ್ರ ರೀತಿಯ ಹೋರಾಟವನ್ನೆದುರಿಸಬೇಕಾಗುತ್ತದೆಂದು ಎಚ್ಚರಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಸದಸ್ಯ ಕಾ॥ ವಿಷ್ಣುಮೂರ್ತಿಯವರು ಮಾತನಾಡಿ ಈ ಹೋರಾಟದಲ್ಲಿ ಜನತೆ ಸಂಪೂರ್ಣ ಭಾಗವಹಿಸಬೇಕೆಂದು ಕರೆ ನೀಡದರು. ತಾಲ್ಲೂಕು ಸಮಿತಿ ಅಧ್ಯಕ್ಷ ಕಾ॥ ಸದಾಶಿವಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಯು.ಬಿ. ನಾರಾಯಣ ಸ್ವಾಗತಿಸಿ, ಕಾರ್ಯದರ್ಶಿ ರಮೇಶ್ ಉಲ್ಲಾಳ್ ವಂದಿಸಿದರು. ಜನತೆಯ ಅಭೂತಪೂರ್ವ ಪ್ರತಿಭಟನೆಗೆ ಹೆದರಿ ಎಚ್ಚರಾದ ಅಧಿಕಾರಿಗಳು ಮಾರ್ಚ್ 21ರಂದು ಉರ್ವಾ ಪೋಲೀಸ್ ಠಾಣೆ ಹೆಡ್‌ಕಾನ್‌ಸ್ಟೇಬಲ್ ಅಚ್ಯುತ್‌ರವರನ್ನು ಹಾಗೂ ಕಾನ್‌ಸ್ಟೇಬಲ್ ಗಣೇಶ್ ಹಾಗೂ ನಾರಾಯಣ್ ನಾಯರ್ ಮತ್ತು ಎಸ್.ಪಿ. ಸುಬ್ರಮಣ್ಯರವರನ್ನು [illegible] ತನಿಖೆಗೆ ಒಳಪಡಿಸಲಾಗುವುದೆಂದು ಸೂಪರಿಡೆಂಟ್ ಆಫ್ ಪೋಲೀಸ್ ತಿಳಿಸಿದರು.

ವಕೀಲರು ಈ ಕೇಸನ್ನು ಫೀ ರಹಿತವಾಗಿ ನಡೆಸಿಕೊಂಡು ಹೋಗಲು ಮುಂದೆ ಬಂದಿದ್ದಾರೆ.

ಡಿ.ವೈ.ಎಫ್.ಐ. ನಡೆಸಿದ ಈ ಹೋರಾಟಕ್ಕೆ ಬೆಂಬಲಿಸಿದ ಎಲ್ಲರಿಗೂ ಸಂಘಟನೆ ತನ್ನ ಕೃತಜ್ಞತೆ ಅರ್ಪಿಸಿ ಮುಂದಿನ ದಿನಗಳಲ್ಲಿ ಯಾವುದೇ ರೀತಿಯಲ್ಲಿ ನಡೆಯುವ ಅನ್ಯಾಯಗಳ ವಿರುದ್ಧ ಹೋರಾಟದ ಮನೋಭಾವ ಬೆಳೆಸಿಕೊಳ್ಳಬೇಕೆಂದು ಕರೆ ನೀಡಿದೆ.

KRNW/BGS-312

MAG (2) PRB DECR 319/—78-79

ಭಾರತ್ ಬಂದ್ ಮತ್ತಷ್ಟು ಸುದ್ದಿಗಳು

ಉತ್ತರಪ್ರದೇಶ

ಉತ್ತರಪ್ರದೇಶದಲ್ಲಿ ಮುಂಜಾಗರೂಕತಾ ಕ್ರಮವಾಗಿ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷದ ಸಂಗಾತಿಗಳೆಲ್ಲರನ್ನೂ ಸೆರೆಯಲ್ಲಿಡಲಾಯಿತು. ಕಾನ್ಪುರದಲ್ಲಿ 178 ಸಂಗಾತಿಗಳು ಬಂಧಿಸಲ್ಪಟ್ಟರು. ಇಂಟಕ್ ಹಲವು ರೀತಿಯಲ್ಲಿ ಕಾರ್ಮಿಕರ ಏಕತೆಯನ್ನು ಮುರಿಯಲು ಪ್ರಯತ್ನಿಸಿತು. ಜೆ.ಕೆ. ಕಾಟನ್, ಜೆ.ಕೆ. ಸಿಂಥಟಿಕ್ಸ್, ಎಲ್. ಐ.ಸಿ., ಆರ್.ಬಿ.ಐ. ಸಂಪೂರ್ಣವಾಗಿ ಬಾಗಿಲು ಹಾಕಿತ್ತು. ಲಕ್ನೋದಲ್ಲಿ ಬಂದ್‌ಗೆ ಅಪಾರ ಬೆಂಬಲ ಶಾಸಕರನ್ನೊಳಗೊಂಡಂತೆ 300 ಜನರ ಬಂಧನ, ವಾರಣಾಸಿಯಲ್ಲಿ 125 ಜನರ ಬಂಧನ, ಅಲಹಾಬಾದ್, ಝಾನ್ಸಿ, ಗೊಂಡಾಗಳಲ್ಲೂ ಯಶಸ್ವಿ ಬಂದ್ ಆಚರಿಸಿದ ಸುದ್ದಿ ತಲುಪಿದೆ.

ಹಿಮಾಚಲ ಪ್ರದೇಶ

ಸಿಮ್ಲಾ ಸಂಪೂರ್ಣ ಬಂದ್ ಆಚರಿಸುತ್ತಿರುವಂತೆಯೇ ಪ್ರತಿಗಾಮಿ ಬಿ.ಜೆ.ಪಿ. ಕಾಂಗ್ರೆ ಹಾಗೂ ಶಿವಸೇನೆ ಶಾಂತಿಯನ್ನು ಕದಡಲು ಪ್ರಾರಂಭಿಸಿದವು. ಹಿಮಾಚಲ ಪ್ರದೇಶದಲ್ಲಿ ಸಿ.ಪಿ.ಐ (ಎಂ), ಸಿಪಿಐ, ಜನತಾ, ಜನ ಮೋರ್ಚಾಗಳನ್ನೊಳಗೊಂಡ 'ಹಿಮಾಚಲ ಕ್ರಾಂತಿಕಾರಿ ಮೋರ್ಚಾ' ಬಂದ್‌ಗೆ ಕರೆನೀಡಿತ್ತು. ಕ್ರಾಂತಿಕಾರಿ ಮೋರ್ಚಾ ಬಂದ್ ಯಶಸ್ವಿಗೊಳಿಸಿತ್ತು. ಈ ಮೊದಲು ಬಂದ್‌ನಲ್ಲಿ ಭಾಗವಹಿಸುತ್ತೇನೆಂದು ಹೇಳಿದ್ದ ಲೋಕದಳ (ಬಿ) ಕೊನೆಯ ನಿಮಿಷದಲ್ಲಿ ಹಿಂತೆಗೆಯಿತು.

ಮಧ್ಯಪ್ರದೇಶ

ಇಡೀ ಮಧ್ಯಪ್ರದೇಶದಾದ್ಯಂತ ಕಾಂಗ್ರೆ 'ನಿರೀಕ್ಷಣಾ ತಂಡ'ವನ್ನು ಕಟ್ಟಿತ್ತು. ಬಂದ್ ಯಶಸ್ವಿಗೊಳಿಸದಿರಲು ನಿರ್ಧರಿಸಿ ಏರ್ಪಡಿಸಿದ್ದ ಈ ತಂಡದ ತೊಡರುಗಳ ಮಧ್ಯೆಯೂ ಮಧ್ಯ ಪ್ರದೇಶ ಬಂದ್ ಯಶಸ್ವಿ ಎಂದು ಸಾರಿದೆ. ಗ್ವಾಲಿಯರ್, ಚಂಬಲ್‌ನಲ್ಲಿ ಯಶಸ್ವಿ ಬಂದ್ ಸಿಪಿಐ (ಎಂ)ನ ಮೆರವಣಿಗೆಯ ಮೇಲೆ ಲಾಠಿ ಛಾರ್ಜ್ ನಡೆಸಲಾಯಿತು. 47 ಫ್ಯಾಕ್ಟರಿಗಳ 15ಸಾವಿರ ಜನ ಪೊಲೀಸ್ ಠಾಣೆಗಳ ಮೇಲೆ ಘೇರಾವ್ ನಡೆಸಿದರು. ಪತ್ರಿಕೆಗಳು ಭಾರತದ ಕೇಂದ್ರ ಬಿಂದು, ಮಹಾಕೋಶಲಂ ವಿಂಧ್ಯಪ್ರದೇಶ, ಛತ್ತೀಸ್‌ಘರ್, ಮಾಳ್ವ ಎಲ್ಲೆಡೆಯೂ ಯಶಸ್ವಿ ಬಂದ್ ಎಂದು ಕರೆದವು. ಮಧ್ಯಪ್ರದೇಶದ ರಾಜ ತಾನು ಎಂದು ಮೀಸೆ ತಿರುಗಿಸುವ ಬಿ.ಜೆ.ಪಿ.ಯ ಬಣ್ಣ ಬಯಲಿಗೆ ಬಿತ್ತು.

ಹರಿಯಾಣ

ಎಲ್ಲೆಡೆಯೂ ಲಾಠಿ ಛಾರ್ಜ್‌ನ ಸುದ್ದಿಗಳ 1200 ಕಾರ್ಯಕರ್ತರ ಬಂಧನ ಕಿಸಾನಸಭಾ ಕಾರ್ಯಕರ್ತರ ತಲೆಯ ಮೇಲೆ ಭಾರೀ ಪೆಟ್ಟು ಲೋಕದಳ (ಎ) ಗುಂಪಿನ ನಾಯಕ ಅಜಿತ್ ಸಿಂಗ್‌ರ ಕೈಮುರಿಯಲಾಯಿತು. ಬಂದ್ ಯಶಸ್ವಿಗೊಳಿಸಿದ ಎಸ್.ಎಫ್.ಐ, ಡಿ.ವೈ.ಎಫ್.ಐ) ಸಿ.ಐ.ಟಿ.ಯು ಕಾರ್ಯಕರ್ತರ ಮೇಲೆ ಹೊಡೆತ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷದ ನಾಯಕ ರಘುಬೀರ್ ಸಿಂಘ್ ಹುದಾರವರನ್ನು ರಾಷ್ಟ್ರೀಯ ಭದ್ರತಾ ಕಾಯ್ದೆಯನ್ವಯ ಬಂಧಿಸಲಾಗಿದೆ.

ವಾಯ್ಸ್ ಆಫ್ ಅಮೆರಿಕಾದ ಅಪಪ್ರಚಾರ

"ವಾಯ್ಸ್ ಆಫ್ ಅಮೆರಿಕಾ" ಬಾನುಲಿ ಕೇಂದ್ರ ಈಚೆಗೆ ಸೋವಿಯೆತ್ ಒಕ್ಕೂಟದ ವಿರುದ್ಧ ದುರುದ್ದೇಶಪೂರಿತ ತೀವ್ರ ಅಪಪ್ರಚಾರದಲ್ಲಿ ತೊಡಗಿದೆ. ಫೆಬ್ರವರಿ 22 ಮತ್ತು 23ನೇ ದಿನಾಂಕಗಳಂದು ವಾಯ್ಸ್ ಆಫ್ ಅಮೆರಿಕಾ ಪ್ರಸಾರ ಮಾಡಿದ ಕಾರ್ಯಕ್ರಮಗಳು ಸೋವಿಯೆತ್ ಒಕ್ಕೂಟದಲ್ಲಿ ಅನುಷ್ಠಾನವಾಗುತ್ತಿರುವ ಪೆರೆಸ್ತ್ರೋಯಿಕಾ ಗ್ಲಾಸ್‌ನೊಸ್ತ್ ಮತ್ತು ಜನತಂತ್ರೀಕರಣ ನೀತಿಗಳನ್ನು ವಿಕೃತ ರೀತಿಯಲ್ಲಿಚಿತ್ರಿಸುವ ಪ್ರಯತ್ನ ನಡೆಸಿದೆ. ಇಂತಹ ಅಪಪ್ರಚಾರದ ವಿರುದ್ಧ ಲಾತ್ವಿಯಾ, ಲಿಥುವಾನಿಯಾ, ಎಸ್ತೋನಿಯಾ, ಗಣರಾಜ್ಯಗಳ ಜನತೆ ಮತ್ತು ಸಮಗ್ರ ಸೋವಿಯೆತ್ ಜನತೆ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಭಾಷಣಗಳು ಹಾಗೂ ರ್‍ಯಾಲಿಗಳ ಮೂಲಕ ಅವರು ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ.

ಇಂತಹ ಮುಚ್ಚುಮರೆಯಿಲ್ಲದ ಪ್ರಚೋದನ ಕೃತ್ಯಗಳು ತಕ್ಷಣ ನಿಲ್ಲಬೇಕು ಎಂದು ಲಾತ್ವಿಯಾ, ಲಿಥುವಾನಿಯಾ ಮತ್ತು ಎಸ್ತೋನಿಯಾ ಗಣರಾಜ್ಯಗಳ ಸರ್ವೋಚ್ಚ ಸೋವಿಯೆತ್‌ಗಳು ಪ್ರತಿಭಟನಾ ಹೇಳಿಕೆಯೊಂದರಲ್ಲಿ ತಿಳಿಸಿವೆ. ಸೋವಿಯೆತ್ ಗಣರಾಜ್ಯಗಳ ಅಂತರಿಕ ವ್ಯವಹಾರಗಳಲ್ಲಿ ಅಮೆರಿಕಾ ಹಸ್ತಕ್ಷೇಪ ನಡೆಸುತ್ತಿದೆ. ಇದು ವಿಶ್ವಸಂಸ್ಥೆಯ ಪ್ರಣಾಳಿಕೆಗೆ ಅಂತರರಾಷ್ಟ್ರೀಯ ಕಾನೂನುಗಳು ಹಾಗೂ ಹೆಲ್ಸಿಂಕಿ ಒಪ್ಪಂದದ ವಿಧಿಗಳಿಗೆ ತದ್ವಿರುದ್ಧವಾಗಿದೆ ಎಂದು ಹೇಳಿಕೆ ಸ್ಪಷ್ಟಪಡಿಸಿದೆ.

ವಾಯ್ಸ್ ಆಫ್ ಅಮೆರಿಕಾದ ಕುತ್ಸಿತ ಅಪಪ್ರಚಾರಗಳನ್ನು ಸೋವಿಯೆತ್ ವಿದೇಶಾಂಗ ವ್ಯವಹಾರ ಸಚಿವಾಲಯವೂ ಖಂಡಿಸಿದೆ. ಇಂತಹ ಪ್ರಸಾರ ಉಭಯ ರಾಷ್ಟ್ರಗಳ ನಡುವಣ ಸಂಬಂಧಗಳ ಸುಧಾರಣೆಗೆ, ಸಂಘರ್ಷವನ್ನು ತಪ್ಪಿಸುವ ಪ್ರಯತ್ನಗಳಿಗೆ ಅಡ್ಡಿ ಉಂಟುಮಾಡಲಿದೆ.

ಅಮೆರಿಕಾದಲ್ಲಿಯೇ ಅಲ್ಪಸಂಖ್ಯಾತ ಜನಾಂಗಗಳ ಹಕ್ಕುಗಳನ್ನು ಗಾಳಿಗೆ ತೂರಲಾಗಿದ್ದು, ಕುಲವಾದ ವ್ಯಾಪಕವಾಗಿ ಹರಡಿದೆ ಹಾಗೂ ಮೂಲನಿವಾಸಿಗಳನ್ನು ತೀವ್ರ ತಾರತಮ್ಯ ಭಾವನೆಯಿಂದ ನೋಡಲಾಗುತ್ತಿದೆ ಎಂದು ಸೋವಿಯೆತ್ ಒಕ್ಕೂಟದ ವಿದೇಶಾಂಗ ಸಚಿವಾಲಯ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದೆ.

1ನೇ ಪುಟದಿಂದ)

ಪ್ರತಿಬಿಂಬವಾಗಿತ್ತು. ಡಿ. ವೈ. ಎಫ್. ಐ, ವಕೀಲರ ಸಂಘ, ಎಸ್. ಎಫ್. ಐ, ಸಂಘಟನೆಗಳಿಂದ ಹೂಮಳೆಯ ಸ್ವಾಗತಗಳನ್ನು ಸ್ವೀಕರಿಸುತ್ತಾ ರೈತರು ವಿಧಾನವಾಗಿ ಸಾಗಿ ವಿಧಾನಸೌಧದ ಎದುರಿನ ಕಬ್ಬನ್ ಪಾರ್ಕ್‌ನಲ್ಲಿ ಸೇರಿದರು. ಬಣ್ಣ ಬಣ್ಣದ ರುಮಾಲು ಬಿಳಿ ಟೋಪಿಗಳನ್ನು ಧರಿಸಿದ್ದ ಬಿಜಾಪುರದ, ಇತರ ಉತ್ತರ ಕರ್ನಾಟಕದ ರೈತರ ಜೊತೆಗೆ ದ.ಕ, ಧಾರವಾಡ ಹುಬ್ಬಳ್ಳಿಗಳ ಬೀಡಿ ಕಾರ್ಮಿಕರು, ಇತರ ಕೈಗಾರಿಕೆಗಳ ಕಾರ್ಮಿಕರೂ ಸೇರಿದರು. ಹಿಂದೆ ಮಹಾರಾಜರುಗಳು ವಾಸಸ್ಥಾನವಾಗಿದ್ದ ಅರಮನೆ ಎರಡು ಮೂರು ದಿನಗಳ ಮೊದಲೇ ಬೆಂಗಳೂರಿಗೆ ಬಂದ ರೈತರವಾಸದ ನೆಲೆಯಾಗಿತ್ತು.

(1ನೇ ಪುಟದಿಂದ)

ಐಕ್ಯತೆಯೊಂದೇ ಮದ್ದು. ಕೋಮುವಾದಿಯಾದ ಬಿ.ಜೆ.ಪಿ.ಯೊಡನೆ ಸಖ್ಯತೆಯೆಂದರೆ ಕಾಂಗ್ರೆ ಸರ್ಕಾರಕ್ಕೆ ನೀತಿ ಬೆಂಬಲ ಕೊಟ್ಟಂತೆಯೇ ಸರಿ ಎಂದು ಕಾ। ಸುರಜೀತ್ ಪ್ರತಿಪಾದಿಸಿದರು.

ಕಾಂ॥ ಸುರಜೀತ್‌ರವರ ಪುಸ್ತಕ What AIKS stands for ಎಂಬುದರ ಕನ್ನಡ ಅವತರಣಿಕೆ ರೈತ ಸಂಘ ಏಕೆ ಬೇಕು? ಎಂಬ ಸ್ನೇಹ ಪ್ರಕಾಶನದ ಪುಸ್ತಕವನ್ನು ಬಿಡುಗಡೆ ಮಾಡಿದ ಅಖಿಲ ಭಾರತ ಕಿಸಾನ್ ಸಭಾ ಅಧ್ಯಕ್ಷೆ ಗೋದಾವರಿ ಪರುಳೇಕರ್‌ರವರು ಭಾರತದ ಆರ್ಥಿಕ ಬಿಕ್ಕಟ್ಟು ರಾಜಕೀಯ ಬಿಕ್ಕಟ್ಟಾಗಿ ಪರಿವರ್ತಿತವಾಗಿದೆ. ಇದನ್ನು ತಪ್ಪಿಸುವ ಶಕ್ತಿ ಕೇವಲ ಕಾರ್ಮಿಕರು ರೈತರು ಎಂದು ಹೇಳಿದರು.

ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಕಾಂ। ಶಂಕರಯ್ಯನವರು ಕರ್ನಾಟಕದ ರೈತರ ಧ್ವನಿಗೆ, ಒತ್ತಾಯಗಳಿಗೆ ಗಮನಕೊಡಿ ಆಡಳಿತ ಭದ್ರವಾಗಲು ಅದೊಂದೇ ಮಾರ್ಗ. ಪ. ಬಂಗಾಳ, ತ್ರಿಪುರಾ ಸರ್ಕಾರಗಳು ಭೂಸುಧಾರಣೆ ಹಾಗೂ ಕೃಷಿಕಾರ್ಮಿಕರ ವೇತನಕ್ಕೆ ನೀಡಿದ ಆದ್ಯತೆಯನ್ನನುಸರಿಸಿ ಎಂದು ಕಿವಿಮಾತು ಹೇಳಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಪ್ರ. ಕಾರ್ಯದರ್ಶಿ ಕಾಂ। ಪಿ. ರಾಮಚಂದ್ರರಾವ್ ಅಧ್ಯಕ್ಷತೆ ವಹಿಸಿದ್ದರು. ಕೇರಳದ ಸಹಕಾರ ಸಚಿವ ಕಾಂ॥ ಟಿ.ಕೆ. ರಾಮಕೃಷ್ಣನ್, ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾದ ಕಾಂ॥ ಆರ್. ವೆಂಕಟರಾಮಯ್ಯ (ಶಾಸಕರು) ಹಾಗೂ ಕಾಂ॥ ಭೀಮಸಿ ಕಲಾದಗಿಯವರು ರೈತರ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿದರು. ಸ್ವಾಗತ ಭಾಷಣ ಮಾಡಿದ ಕಾಂ॥ ಸೂರ್ಯನಾರಾಯಣರಾವ್‌ರವರು ಒಳಜಗಳ ನಿಲ್ಲಿಸಿ ಕಾಂಗ್ರೆ ಪಕ್ಷಕ್ಕೆ ಅವಕಾಶ ಮಾಡಿಕೊಡಬೇಡಿ ಎಂದು ಜನತಾಪಕ್ಷಕ್ಕೆ ಎಚ್ಚರಿಸಿದರು.

ಶೃಂಗಸಭೆ ಮೂಡಿಸಿದ ಆತ್ಮವಿಶ್ವಾಸ

ಮಧ್ಯಮ ವ್ಯಾಪ್ತಿಯ ಕ್ಷಿಪಣಿಗಳ ಹಾಗೂ ಸಮೀಪವ್ಯಾಪ್ತಿಯ ಕ್ಷಿಪಣಿಗಳ ನಿರ್ಮೂಲನ ಸಲುವಾಗಿ ಈಚೆಗೆ ಸೋವಿಯೆತ್ ಒಕ್ಕೂಟ ಮತ್ತು ಅಮೆರಿಕಾ ಮಹತ್ವದ ಕೌಲಿಗೆ ಸಹಿ ಹಾಕಿದ ಸುದ್ದಿ ಕೇಳಿ ಇಡೀ ಜಗತ್ತು ನೆಮ್ಮದಿಯ ನಿಟ್ಟುಸಿರು ಚೆಲ್ಲಿದೆ ಎಂದು ಪ್ರಾವ್ಡಾ ಪತ್ರಿಕೆಯ ಲೇಖನವೊಂದು ಇಂದು ವರ್ಣಿಸಿದೆ. ನ್ಯೂಕ್ಲಿಯರ್ ಅಸ್ತ್ರಗಳಿಂದ ಮುಕ್ತವಾದ ಜಗತ್ತನ್ನು ಸ್ಥಾಪಿಸುವ ನಿಟ್ಟಿನಲ್ಲಿ ಇದು ಮೊದಲ ವಾಸ್ತವಿಕ ಹೆಜ್ಜೆಯಾಗಿದೆ ಎಂದು ಪ್ರಾವ್ಡಾ ವರ್ಣಿಸಿದೆ. ಇದರೊಂದಿಗೆ ಎಬಿಎಂ ಕೌಲನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ವ್ಯೂಹಾತ್ಮಕ ಆಕ್ರಮಣಕಾರಿ ಸ್ವರೂಪದ ಅಸ್ತ್ರಗಳನ್ನು ಗಣನೀಯವಾಗಿ ಕಡಿತಗೊಳಿಸಲು ಸೂಕ್ತ ಪರಿಸ್ಥಿತಿ ನಿರ್ಮಾಣವಾಗಲಿದೆ.

ಶಸ್ತ್ರಾಸ್ತ್ರ ಪೈಪೋಟಿಯನ್ನು ಮುಂದುವರಿಸುತ್ತಾ ಸ್ವಯಂವಿನಾಶಕ್ಕೆ ಸಿದ್ಧವಾಗುವುದು ಅಥವಾ ನಿರಾಯುಧೀಕರಣ ಸಾಧಿಸಿ ಇನ್ನೂ ಹೆಚ್ಚಿನ ಪ್ರಗತಿಯ ಪಥದಲ್ಲಿ ಮುಂದುವರಿಯುವುದು. ಇಂದು ಜಗತ್ತು ಇವೆರಡರಲ್ಲಿ ಒಂದನ್ನು ಆಯ್ಕೆ ಮಾಡಬೇಕಾದ ತುರ್ತು ಅಗತ್ಯವಿದೆ. ಸೋವಿಯೆತ್ ಅಮೆರಿಕಾ ಶೃಂಗಸಭೆ ನ್ಯೂಕ್ಲಿಯರ್ ಅಸ್ತ್ರಗಳ ಯುಗವನ್ನು ಹಿನ್ನೆಲೆಗೆ ಸರಿಸಿ ನ್ಯೂಕ್ಲಿಯರ್ ಅಸ್ತ್ರಮುಕ್ತ ಜಗತ್ತಿನ ಸ್ಥಾಪನೆಗೆ ನಾಂದಿ ಹಾಕಿದೆ. ಈ ಶೃಂಗಸಭೆ ಮೂಡಿಸಿದ ಆತ್ಮವಿಶ್ವಾಸ, ನಿರಾಯುಧೀಕರಣ ಮೂಲಕ ಮಾತ್ರ ಜಗತ್ತಿನಲ್ಲಿ ಸುಭದ್ರತೆ ಸಾಧ್ಯವಿದೆ ಎಂಬ ಧ್ಯೇಯಕ್ಕಾಗಿ ಹೋರಾಡುವ ಶಕ್ತಿಗಳನ್ನು ಬಲಪಡಿಸಿದೆ. ನ್ಯೂಕ್ಲಿಯರ್ ನಿರಾಯುಧೀಕರಣ ಮಿಲಿಟರಿ ದೃಷ್ಟಿಯಿಂದ ರಾಜಕೀಯ ಮಾತ್ರ ಉಪಯುಕ್ತವಲ್ಲ, ಅದು ಇಂದಿನ ತುರ್ತು ಆರ್ಥಿಕ ಅವಶ್ಯಕತೆಯೂ ಆಗಿದೆ ಎಂದು ಪ್ರಾವ್ಡಾ ಲೇಖನ ವರ್ಣಿಸಿದೆ.

ಮಹಿಳೆಯರ ಸಂಘಟನೆ ಬೆಳೆಸಲು ಕಾ॥ ಗೋದಾವರಿ ಕರೆ

ದಿನಾಂಕ 5-4-88ರಂದು ಆರ್. ಆರ್. ಕಲ್ಯಾಣಮಂಟಪದಲ್ಲಿ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯಿಂದ ಸಭೆಯನ್ನು ಏರ್ಪಡಿಸಲಾಗಿತ್ತು. ಕಾ॥ ಗೋದಾವರಿ ಪರುಳೇಕರ್‌ರವರು ಮಹಿಳಾ ಸಂಘಟನೆ ಬೆಳೆದು ಬಂದ ಪರಂಪರೆ, ಅವರ ಎಂಟು ವರ್ಷದ ಜೈಲು ಜೀವನ, ಕರ್ನಾಟಕದಲ್ಲಿ ಮಹಿಳೆಯರು ಅನುಭವಿಸುತ್ತಿರುವ ಸಂಕಷ್ಟಗಳ ಕುರಿತು ವಿವರಿಸುತ್ತಾ, ಈ ಸಮಸ್ಯೆಗಳು ಬಗೆಹರಿಯಬೇಕಾದರೆ ಮಹಿಳಾ ಸಂಘಟನೆ ಹೆಚ್ಚು ಶಕ್ತಿಯುತವಾಗಿ ಬೆಳೆಸಿ, ಕಾರ್ಮಿಕ ವರ್ಗದ ಜೊತೆ ಸಾಗಬೇಕೆಂದು ವಿವರಿಸಿದರು. ಮಹಿಳಾ ಸಂಘಟನೆಯ ರಾಜ್ಯ ಸಂಚಾಲಕಿಯವರಾದ ಕಾ॥ ಹರಿಣಿ ಕಕ್ಕೇರಿಯವರು ಗೋದಾವರಿ ಪರುಳೇಕರ್‌ರವರ ಭಾಷಣವನ್ನು ಕನ್ನಡಕ್ಕೆ ಅನುವಾದಿಸಿದರು.

ಪ್ರಾರಂಭದಲ್ಲಿ ಮಾತನಾಡಿದ ಕಾ॥ ಶಾಂತಕುಮಾರಿಯವರು ಕಾ॥ ಗೋದಾವರಿ ಸ್ವತಂತ್ರ ಪೂರ್ವದಿಂದಲೂ ಮಹಾರಾಷ್ಟ್ರದ ಆದಿವಾಸಿಗಳ ಹೋರಾಟಕ್ಕೆ ಸ್ಫೂರ್ತಿ ನೀಡಿ ದುಡಿದ ಹಿನ್ನೆಲೆಯನ್ನು ವಿವರಿಸಿದರು. ಕೊನೆಯಲ್ಲಿ ಬೆಂಗಳೂರು ಜಿಲ್ಲಾ ಸಂಘಟನಾ ಸಮಿತಿಯ ಸಂಚಾಲಕಿಯಾದ ಕಾ॥ ವಿಮಲಾರವರು ವಂದನಾರ್ಪಣೆ ಮಾಡಿದರು.

ಈ ಸಭೆಯಲ್ಲಿ 80ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು.

ಘಟಕಪ್ರಾರಂಭ

ದಿ. 10-4-88ರಂದು ಬೆಂಗಳೂರಿನ ರಾಜಗೋಪಾಲ ನಗರ ಪ್ರದೇಶದಲ್ಲಿ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಸಂಘಟನಾ ಸಮಿತಿಯನ್ನೂ ರಚಿಸಲಾಯಿತು. ಸಭೆಯಲ್ಲಿ ಜಿಲ್ಲಾ ಸಂಚಾಲಕಿ ವಿಮಲಾ ಭಾಗವಹಿಸಿದ್ದರು.

Printed & Published by P. Ramachandra Rao on behalf of the Communist Party of India [Marxist] Karnaka State Committee K.V. Temple Street, Sultanpet, Bangalore-560053 Editorial and Managerial Office: L-56at K.V. Temple Street Sultanpet B-53 Phone. 75331 UMA Printers B-53 Ediior: P. Ramachandra Ra[o] Managing Editor: N.K. UpadyaY[a]